# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 172 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 09.01.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 172 • PRGI No:KARKAN/2023/88055 • VIJAYANAGARA • 09.01.2025 • Thursday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits



HAMPI TIMES No.1 LEADING VIJAYANAGARA District News Paper



ಸುದ್ದಿ, ಜಾಹೀರಾತು

ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳಿಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ

ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

94486 33038
Email: hampitimes@gmail.com


ಅನುಮೋದನೆಯತ್ತ ಅಧಿಕಾರಿಗಳ ಚಿತ್ತ | ತಗ್ಗಲಿದೆ 300ಕ್ಕೂ ಅಧಿಕ ಕಿ.ಮೀ ಪ್ರಯಾಣ ಪ್ರಯಾಸ

ಒಂದು ಜೆಡಿ ಕಚೇರಿ ಸ್ಥಳಾಂತರ: ಆಯುಕ್ತರು | ಕಚೇರಿ, ಮೂಲಭೂತ ಸೌಕರ್ಯ ಒದಗಿಸಲು ಸಿದ್ಧ ಎಂದ ಡಿಸಿ

# ಹೊಸಪೇಟೆಗೆ ಒಂದು ಜೆಡಿ ಕಚೇರಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರಿ

## ಮೂರು ಜಿಲ್ಲೆಗೆ ಮಂಜೂರು ಹುದ್ದೆಗಳು: 16255 ಪ್ರಾಥಮಿಕ, 4044 ಮಾಧ್ಯಮಿಕ ಶಿಕ್ಷಕರು, 1077 ಬೋಧಕೇತರ ಸಿಬ್ಬಂದಿ

## ಭರ್ತಿಯಾಗಬೇಕಿರುವ ಹುದ್ದೆಗಳು: 5454 ಪ್ರಾಥಮಿಕ, 1254 ಮಾಧ್ಯಮಿಕ ಶಿಕ್ಷಕರು, 281 ಬೋಧಕೇತರ ಸಿಬ್ಬಂದಿ

■ ಬಸಾಪುರ ಬಸವರಾಜ
ಹಂಪಿ ಟೈಮ್ಸ್ ಹೊಸಪೇಟೆ

ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳು ಎಂಬ ಹಣೆಪಟ್ಟಿಯನ್ನು ಹೊಂದಿರುವ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಶೈಕ್ಷಣಿಕ ಪ್ರಗತಿ ಹಾಗೂ ಶೈಕ್ಷಣಿಕ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಯ ಹುದ್ದೆಗಳನ್ನು ಒಳಗೊಂಡಂತೆ ಕಲಬುರಗಿ ಅಪರ ಆಯುಕ್ತರ ಕಚೇರಿಯ ಸಹ ನಿರ್ದೇಶಕ (ಆಡಳಿತ) ಕಚೇರಿಯನ್ನು ವಿಜಯನಗರ ಜಿಲ್ಲಾ ಕೇಂದ್ರ ಹೊಸಪೇಟೆಗೆ ಸ್ಥಳಾಂತರಗೊಳಿಸಿ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಆಡಳಿತಾತ್ಮಕ ಅನುಮತಿಗೆ ಕಲಬುರಗಿ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತ ಡಾ.ಆಕಾಶ್ ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಿರುವುದು ಈ ಭಾಗದ ಶೈಕ್ಷಣಿಕ ವಲಯದಲ್ಲಿ ಪ್ರಗತಿಯ ಚಿಂತನೆಗಳು ಗರಿಗೆದರಿವೆ.

ಸರ್ಕಾರ ಜಾರಿಗೊಳಿಸಿದ ಶೈಕ್ಷಣಿಕ ಯೋಜನೆಗಳನ್ನು ಶಾಲೆಗಳಲ್ಲಿ ಪರಿಣಾಮಕಾರಿ ಅನುಷ್ಠಾನಕ್ಕೆ ಆಡಳಿತಾಧಿಕಾರಿಗಳು ಗಮನ ಹರಿಸುವುದು ಪ್ರಮುಖ ಪಾತ್ರವಹಿಸುತ್ತದೆ. ಆದರೆ ಶಿಕ್ಷಕರ ಬಡ್ತಿ, ವರ್ಗಾವಣೆ, ಹೊಸ ಶಾಲೆಗಳ ಆರಂಭ ಸೇರಿದಂತೆ ಅನೇಕ ಶೈಕ್ಷಣಿಕ ಕಾರ್ಯ ಗಳಿಗಾಗಿ ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಯಿಂದ ಸುಮಾರು 300ಕ್ಕೂ ಅಧಿಕ ಕಿ.ಮೀ ಹೋಗಿ ಬರುವುದರಲ್ಲೆ ಶಿಕ್ಷಕರು, ಶಿಕ್ಷಣ ಸಂಸ್ಥೆಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ಸೇರಿದಂತೆ ಡಿಡಿಪಿಐ ಸುಸ್ತೋ ಸುಸ್ತಾಗುತ್ತಿದ್ದಾರೆ. ಇದರಿಂದ ಸಕಾಲದಲ್ಲಿ ಪರಿಣಾಮಕಾರಿಯಾಗಿ ಕಾರ್ಯಗಳು ನಡೆಯುತ್ತಿಲ್ಲ. ಶೈಕ್ಷಣಿಕ ಪ್ರಗತಿಗೂ ಹಿನ್ನಡೆಯುಂಟಾಗಿದೆ ಎಂಬುದಕ್ಕೆ ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವೇ ಕನ್ನಡಿಯಂತಿದೆ. ಅಲ್ಲದೇ ಮೂರು ಜಿಲ್ಲೆಗಳ ಗಣನೀಯ ಅಂತರದಿಂದಾಗಿ ಆಡಳಿತಾತ್ಮಕ ಸಮಸ್ಯೆಗಳು ಉಂಟಾಗುತ್ತಿದೆ. ವಿಷಯಗಳ ವಿಳಂಬಿತ ಪರಿಹಾರ, ವರ್ಗಾವಣೆ, ನಿಯೋಜನೆ ಮತ್ತು ಶಿಸ್ತು





ಕ್ರಮಗಳಂತಹ ವಿಷಯಗಳ ಸಮಯೋಚಿತ ಪರಿಹಾರ ದೊರೆಯದಂತಾಗುತ್ತಿದೆ. ಶೈಕ್ಷಣಿಕ ಯೋಜನೆಗಳ ಪರಿಣಾಮಕಾರಿ ಮೇಲ್ವಿಚಾರಣೆ, ಮಧ್ಯಾಹ್ನದ ಬಿಸಿಯೂಟ, ಸರ್ವ ಶಿಕ್ಷಣ ಅಭಿಯಾನದ ಮತ್ತು ಇತರೆ ವಿವಿಧ ಶೈಕ್ಷಣಿಕ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಮೇಲ್ವಿಚಾರಣೆಯು ಭೌಗೋಳಿಕ ಅಂತರದಿಂದಾಗಿ ಪರಿಣಾಮಕಾರಿಯಾಗುತ್ತಿಲ್ಲ ಎಂಬುದುನ್ನು ಅಪರ ಆಯುಕ್ತರು ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ. ಸವಾಲುಗಳನ್ನು ನಿವಾರಿಸಿ, ಕಲ್ಯಾಣ ಕರ್ನಾಟಕದ ಪ್ರದೇಶದಲ್ಲಿ ಆಡಳಿತದಲ್ಲಿ ದಕ್ಷತೆ ಹೆಚ್ಚಿಸಲು ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳನ್ನು ಸೇರಿಸಿ ವಿಜಯನಗರ ಜಿಲ್ಲೆಗೆ ಸಹನಿರ್ದೇಶಕರ(ಆಡಳಿತ) ಕಚೇರಿಯನ್ನು ಸ್ಥಳಾಂತರಕ್ಕೆ ಕೋರಿರುವುದು ಈ ಭಾಗದ ಶಿಕ್ಷಕರು, ಅಧಿಕಾರಿಗಳ ವಲಯದಲ್ಲಿ ಸಂತಸ ಇಮ್ಮಡಿಗೊಳಿಸಿದೆ.

ಈ ಕಚೇರಿಯು ಕಲಬುರಗಿಯ ಶಾಲಾ ಶಿಕ್ಷಣ ಆಯುಕ್ತರ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲಿದೆ. ಉಲ್ಲೇಖಿತ ಸರ್ಕಾರಿ ಆದೇಶದನ್ವಯ ದಾರವಾಡ ಆಯುಕ್ತಾಲಯ ವ್ಯಾಪ್ತಿಯ ಬೆಳಗಾವಿ ವಿಭಾಗದ ಸಹ ನಿರ್ದೇಶಕರು (ಪರೀಕ್ಷೆ)ಕಛೇರಿಯು

### ಕಚೇರಿ ವ್ಯಾಪ್ತಿಗೊಳಪಡುವ ಶಾಲೆಗಳು

**ವಿಜಯನಗರ:** ಪ್ರಾಥಮಿಕ, ಪ್ರೌಢಶಾಲೆ – 1073 ಶಾಲೆ, ಖಾಸಗಿ ಅನುದಾನಿತ 120 ಶಾಲೆಗಳು, ಅನುದಾನರಹಿತ ಖಾಸಗಿ ಪ್ರಾಥಮಿಕ, ಪ್ರೌಢಶಾಲೆ ಸೇರಿ 481 ಶಾಲೆ, ಇತರೆ 35 ಸೇರಿ ಒಟ್ಟು 1709 ಸೇರಿದಂತೆ ಒಟ್ಟು 4924 ಶಾಲೆಗಳಿಗೆ

**ಬಳ್ಳಾರಿ:** ಪ್ರಾಥಮಿಕ, ಪ್ರೌಢಶಾಲೆ ಸೇರಿ 762 ಶಾಲೆ, ಖಾಸಗಿ ಅನುದಾನಿತ 76 ಶಾಲೆಗಳು, ಅನುದಾನ ರಹಿತ ಖಾಸಗಿ ಪ್ರಾಥಮಿಕ, ಪ್ರೌಢಶಾಲೆ ಸೇರಿ 579 ಶಾಲೆ, ಇತರೆ 34 ಸೇರಿ ಒಟ್ಟು 1451,

**ಕೊಪ್ಪಳ:** ಪ್ರಾಥಮಿಕ, ಪ್ರೌಢಶಾಲೆ – 1146 ಶಾಲೆ, ಖಾಸಗಿ ಅನುದಾನಿತ 68 ಶಾಲೆಗಳು, ಅನುದಾನರಹಿತ ಖಾಸಗಿ ಪ್ರಾಥಮಿಕ, ಪ್ರೌಢಶಾಲೆ ಸೇರಿ 493 ಶಾಲೆ, ಇತರೆ 57 ಸೇರಿ ಒಟ್ಟು 1764 ಶಾಲೆಗಳಿಗೆ ಈ ವಿಭಾಗೀಯ ಸಹಾಯಕ ನಿರ್ದೇಶಕರ (ಆಡಳಿತ) ಕಚೇರಿಗೆ ಒಳಪಡಲಿವೆ.

ವಿಕೇಂದ್ರಿಕರಣಗೊಂಡು ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪಿತವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಸದರಿ ಅಪರ ಆಯುಕ್ತರ ಕಛೇರಿ ಧಾರವಾಡದಲ್ಲಿದ್ದು ಸಹ ನಿರ್ದೇಶಕರ ಕಛೇರಿಯು ಸಂಪೂರ್ಣ ಸಿಬ್ಬಂದಿಗಳು ಹಾಗೂ ಮೂಲಭೂತ ಸೌಕರ್ಯಗಳೊಂದಿಗೆ ಕಳೆದ 25 ವರ್ಷಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿರುವ ಬಗ್ಗೆ ಅಪರ ಆಯುಕ್ತರು ಗಮನ ಸೆಳೆದಿದ್ದಾರೆ.

ಮೂರು ಜಿಲ್ಲೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಪ್ರಸ್ತಾವನೆಗಳನ್ನು (ಪರೀಕ್ಷೆ, ಲೆಕ್ಕಪತ್ರ ಹಾಗೂ ಬಿಲ್ಲು) ಶಾಖೆಗಳನ್ನು ಹೊರತುಪಡಿಸಿ ಸ್ಥಳಾಂತರಿಸಿದ ಸಹ ನಿರ್ದೇಶಕರ (ಆಡಳಿತ), ಹೊಸಪೇಟೆ ಕಛೇರಿಯಿಂದಲೇ ಪಡೆದು ಕ್ರಮವಹಿಸಲು ಉದ್ದೇಶಿಸಲಾಗಿದೆ. ಮುಂದುವರೆದು, ಕಲ್ಯಾಣ ಕರ್ನಾಟಕ ವಿಭಾಗದ ಇನ್ನೂಳಿದ ನಾಲ್ಕು ಜಿಲ್ಲೆಗಳಾದ, ಬೀದರ, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ (ಪ್ರಾಥಮಿಕ, ಪ್ರೌಢ ಹಾಗೂ ಲೆಕ್ಕಪತ್ರ ಶಾಖೆ ಹೊರತುಪಡಿಸಿ) ಪ್ರಸ್ತುತ ನಮ್ಮ ಕಾರ್ಯಾಲಯದಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಸಹ ನಿರ್ದೇಶಕರ (ಪರೀಕ್ಷೆ) ರವರಿಗೆ ಹೆಚ್ಚುವರಿ ಪ್ರಭಾರ ನೀಡಿ ಕಡತಗಳನ್ನು, ಪ್ರಸ್ತಾವನೆಗಳನ್ನು ಕಾರ್ಯ ವಿಧಾನಕ್ಕೆ ತರಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

### ಮೂರು ಜಿಲ್ಲೆಯ ಶಿಕ್ಷಕರ ಮತ್ತು ಬೋಧಕೇತರ ಹುದ್ದೆಗಳ ವಿವರ:

**ವಿಜಯನಗರ ಜಿಲ್ಲೆಗೆ ಮಂಜೂರಾದ 5387 ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಪೈಕಿ 4399 ಕಾರ್ಯನಿರ್ವಹಿಸುತ್ತಿದ್ದು, 988 ಹುದ್ದೆಗಳು ಖಾಲಿ ಇವೆ. 1186 ಮಾಧ್ಯಮಿಕ ಶಿಕ್ಷಕರ ಮಂಜೂರು 997 ಶಿಕ್ಷಕರಿದ್ದಾರೆ. 189 ಹುದ್ದೆಗಳು ಖಾಲಿ ಇವೆ. ಬೋಧಕೇತರ ಹುದ್ದೆಗಳು 377 ಮಂಜೂರು, 287 ಕಾರ್ಯನಿರ್ವಹಿಸುತ್ತಿದ್ದು, 90 ಹುದ್ದೆಗಳು ಖಾಲಿ ಇವೆ.**

**ಬಳ್ಳಾರಿ ಜಿಲ್ಲೆಗೆ ಮಂಜೂರಾದ 4506 ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಪೈಕಿ 2443 ಕಾರ್ಯನಿರ್ವಹಿಸುತ್ತಿದ್ದು, 2063 ಹುದ್ದೆಗಳು ಖಾಲಿ ಇವೆ. 1170 ಮಾಧ್ಯಮಿಕ ಶಿಕ್ಷಕರ ಮಂಜೂರು 640 ಶಿಕ್ಷಕರಿದ್ದಾರೆ. 530 ಹುದ್ದೆಗಳು ಖಾಲಿ ಇವೆ. ಬೋಧಕೇತರ ಹುದ್ದೆಗಳು 290 ಮಂಜೂರು, 214 ಕಾರ್ಯನಿರ್ವಹಿಸುತ್ತಿದ್ದು, 76 ಹುದ್ದೆಗಳು ಖಾಲಿ.**

**ಕೊಪ್ಪಳ ಜಿಲ್ಲೆಗೆ ಮಂಜೂರಾದ 6362 ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಪೈಕಿ 3959 ಕಾರ್ಯನಿರ್ವಹಿಸುತ್ತಿದ್ದು, 2403 ಹುದ್ದೆಗಳು ಖಾಲಿ ಇವೆ. 1688 ಮಾಧ್ಯಮಿಕ ಶಿಕ್ಷಕರ ಮಂಜೂರು 1153 ಶಿಕ್ಷಕರಿದ್ದಾರೆ. 535 ಹುದ್ದೆಗಳು ಖಾಲಿ ಇವೆ. ಬೋಧಕೇತರ ಹುದ್ದೆಗಳು 410 ಮಂಜೂರು, 295 ಕಾರ್ಯನಿರ್ವಹಿಸುತ್ತಿದ್ದು, 115 ಹುದ್ದೆಗಳು ಖಾಲಿ.**

> ವಿಜಯನಗರ ಜಿಲ್ಲೆಯಲ್ಲಿ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಕಚೇರಿಗಳು ಸೇರಿದಂತೆ ವಿಭಾಗೀಯ ಮಟ್ಟದ ಕಚೇರಿಗಳನ್ನು ಆರಂಭಿಸಲು ಸರ್ಕಾರದ ಅನುಮತಿ ದೊರೆತಾಕ್ಷಣ ಜಿಲ್ಲಾ ಕೇಂದ್ರದಲ್ಲಿ ಅಗತ್ಯ ಕಚೇರಿ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಜಿಲ್ಲಾಡಳಿತ ಸಿದ್ಧವಿದೆ. ವಿಜಯನಗರ ಜಿಲ್ಲಾ ಕೇಂದ್ರವು ಉತ್ತರ ಮತ್ತು ದಕ್ಷಿಣ ಕರ್ನಾಟಕದ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಕೇಂದ್ರ ಬಿಂದುವಾಗಿದೆ.
> – ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ



### ಕಚೇರಿಗೆ ವರ್ಗಾವಣೆಗೊಳ್ಳಲಿರುವ ಹುದ್ದೆಗಳು

ಸಹ ನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ದೈ.ಶಿ), ಹಿರಿಯ ಸಹಾಯಕ ನಿರ್ದೇಶಕರು (ಡಿಎಲ್‌ಆರ್‌ಸಿ), ಸಹಾಯಕ ನಿರ್ದೇಶಕರು (ಭೋಧಕೇತರ–ಆಡಳಿತ), ಇಬ್ಬರು ಅಧೀಕ್ಷಕರು, ಮೂವರು ಪ್ರ.ದ.ಸಹಾಯಕರು, ಮೂವರು ದ್ವಿ.ದ.ಸ., ವಾಹನ ಚಾಲಕ, ಗ್ರೂ–ಡಿ ನೌಕರರ ಇಬ್ಬರು

> ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದಾಗಿ ಕಲಬುರಗಿ ಆಯುಕ್ತಾಲಯದ ಎರಡು ಸಹ ನಿರ್ದೇಶಕರ ಕಚೇರಿಗಳ ಪೈಕಿ ಒಂದು ಸಹ ನಿರ್ದೇಶಕರ (ಆಡಳಿತ) ಕಛೇರಿಯನ್ನು ಮಾತ್ರ ವಿಜಯನಗರ ಜಿಲ್ಲೆಯ ಕೇಂದ್ರ ಹೊಸಪೇಟೆಗೆ ಸ್ಥಳಾಂತರಿಸಲು ಕಚೇರಿಗೆ ಸ್ಥಳ, ಹುದ್ದೆಗಳ ಸ್ಥಳಾಂತರಕ್ಕೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಕೊಳ್ಳಲು ಆಡಳಿತಾತ್ಮಕ ಅನುಮತಿಗಾಗಿ ಸರ್ಕಾರಕ್ಕೆ ಕೋರಲಾಗಿದೆ. ಅನುಮತಿ ದೊರೆತಾಕ್ಷಣ ಸ್ಥಳಾಂತರಕ್ಕೆ ಕ್ರಮವಹಿಸಲಾಗುವುದು.
> – ಡಾ.ಆಕಾಶ, ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಮೈಕ್ರೋ ನ್ಯೂಸ್

## ಜ.18 ನವೋದಯ ಪ್ರವೇಶಾತಿ ಪರೀಕ್ಷೆ

ಹಂಪಿ ಟೈಮ್ಸ್ ಹೊಸಪೇಟೆ

ಜನವರಿ.8(ಕ ವಾ): ಜಿಲ್ಲೆಯ ಚಿಕ್ಕಜೋಗಿಹಳ್ಳಿ ಜವಾಹರ್ ನವೋದಯ ವಿದ್ಯಾಲಯದ 2025–26 ಪ್ರವೇಶಕ್ಕೆ ಜ.18 ರಂದು ಪ್ರವೇಶ ಪರೀಕ್ಷೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯರಾದ ಸುದೇಶ್ ಗೋಪಾಲ ಮುಲ್ಲುರೆ ತಿಳಿಸಿದ್ದಾರೆ.

ನವೋದಯ ಪ್ರವೇಶಾತಿ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಪೋಷಕರು https://cbseitms.rcil.gov.in/admincard/admincard ಈ ವೆಬ್‌ಸೈಟ್ ಮೂಲಕ ಡೌನ್ಲೋಡ್ ಮಾಡಿಕೊಂಡು ಪ್ರವೇಶ ಪತ್ರದಲ್ಲಿ ನಮೂದಾಗಿರುವ ಪರೀಕ್ಷೆ ಕೇಂದ್ರಗಳಲ್ಲಿ ಜ.18 ರಂದು ಬೆ.11 ಗಂಟೆಗೆ ಅಗತ್ಯ ದಾಖಲೆಗಳೊಂದಿಗೆ ತಪ್ಪದೇ ಹಾಜರಾಗಬೇಕೆಂದು ತಿಳಿಸಿದ್ದಾರೆ.

## ಜ.14 ರಂದು ಹಂಪಿ ಮೃಗಾಲಯ ಪ್ರವಾಸಿಗರ ವೀಕ್ಷಣೆಗೆ ಅವಕಾಶ

ಹಂಪಿ ಟೈಮ್ಸ್ ಹೊಸಪೇಟೆ

ಹಂಪಿಯ ಮೃಗಾಲಯ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ಜ.14 ರಂದು ಪ್ರವಾಸಿಗರ ವೀಕ್ಷಣೆಗೆ ತೆರೆದಿರುತ್ತದೆ ಎಂದು ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ರಾಜೇಶ್ ನಾಯ್ಕ ತಿಳಿಸಿದ್ದಾರೆ.

ಮೃಗಾಲಯವು ಪ್ರತಿ ಮಂಗಳವಾರದಂದು ಸಾರ್ವಜನಿಕರ ವೀಕ್ಷಣೆಗೆ ರಜೆ ದಿನವಾಗಿರುತ್ತದೆ. ಆದರೆ ಮಕರ ಸಂಕ್ರಾಂತಿ ಹಬ್ಬದ ನಿಮಿತ್ತ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಪ್ರವಾಸಿಗರಿಗೆ ವೀಕ್ಷಣೆಗೆ ಅನುವು ಮಾಡಿಕೊಡಲು ರಜಾಮುಕ್ತಗೊಳಿಸಿ ನಿತ್ಯದಂತೆ ವೀಕ್ಷಣೆಗೆ ಅವಕಾಶವಿದೆ. ಕುಟುಂಬದೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮೃಗಾಲಯ ವೀಕ್ಷಣೆಗೆ ಆಗಮಿಸಿ ಪ್ರಾಣಿಗಳ ವೀಕ್ಷಣೆ ಮಾಡಬಹುದು.

# ಹಂಪಿ ಉತ್ಸವ ಸಿದ್ಧತೆಗೆ ಸಮಿತಿಗಳ ರಚಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಫೆ.28 ರಿಂದ ಮೂರುದಿನ ಉತ್ಸವ

## ಮೂರು ದಿನ ಅದ್ದೂರಿ ಆಚರಣೆಗೆ ಸಿದ್ಧತೆ, ಸ್ವತಂತ್ರ ಹೊಣೆಗಾರಿಕೆ ಇರಲಿ

## ಹಂಪಿ ಉತ್ಸವದ ಯಶಸ್ವಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮುಕ್ತವಾಗಿ ಸಲಹೆ ನೀಡಬಹುದು





■ ಹಂಪಿ ಟೈಮ್ಸ್ ಹೊಸಪೇಟೆ

ಫೆಬ್ರವರಿ 28 ರಿಂದ ಮೂರು ದಿನಗಳ ಕಾಲ ನಡೆಯುವ ಹಂಪಿ ಉತ್ಸವವನ್ನು ವಿಶೇಷವಾಗಿ ಆಚರಿಸಲು ಅಧಿಕಾರಿಗಳು ಉತ್ಸುಕರಾಗಬೇಕಿದೆ. ಸಿದ್ಧತೆಗೆ ಉಪ ಸಮಿತಿಗಳನ್ನು ರಚಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಏರ್ಪಡಿಸಿದ್ದ 2025ರ ಹಂಪಿ ಉತ್ಸವದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಬುಧವಾರ ಮಾತನಾಡಿದರು. ಹಿಂದಿನ ಉತ್ಸವದಲ್ಲಿ ಸುಮಾರು 5 ಲಕ್ಷ ಕ್ಕೂ ಹೆಚ್ಚು ಜನರು ವೀಕ್ಷಣೆ ಮಾಡಿದ್ದರು. ಆದಾಗ್ಯೂ ಎಲ್ಲಾ ರೀತಿಯ ಸಕಲ ಸಿದ್ಧತೆಗಳನ್ನು ಕೈಗೊಂಡು ಜಿಲ್ಲಾಡಳಿತ ಯಶಸ್ವಿಯಾಗಿ ಆಚರಣೆಗೆ ಕ್ರಮ ವಹಿಸಲಾಗಿತ್ತು. ಆದರೆ ಈ ಬಾರಿ ಇನ್ನಷ್ಟು ವಿಶೇಷವಾಗಿ ಇಡೀ ರಾಜ್ಯದ ಜನತೆಯನ್ನು ಆಕರ್ಷಿಸುವ ನಿಟ್ಟಿನಲ್ಲಿ ಪೂರ್ವತಯಾರಿ ನಡೆಸಲು ಅಧಿಕಾರಿಗಳ ಮತ್ತು ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಿದೆ. ಅಧಿಕಾರಿಗಳು ಉತ್ಸುಕತೆಯಿಂದ ಕಾರ್ಯನಿರ್ವಹಿಸಲು ಸಜ್ಜಾಗಬೇಕು. ಈ ಬಾರಿಯ ಸಮಿತಿಗಳನ್ನು ಶೀಘ್ರವೇ ರಚಿಸಿ ಕಾರ್ಯೋನ್ಮುಖರಾಗಬೇಕು. ಸಮಿತಿಗಳು ಸ್ವತಂತ್ರವಾಗಿ ಹೊಣೆಗಾರಿಕೆಯನ್ನು ವಹಿಸಿಕೊಂಡು ಯಶಸ್ವಿ ಆಚರಣೆಗೆ ಸಿದ್ದತೆ ಕೈಗೊಳ್ಳಬೇಕು ಎಂದರು. ಜಿಲ್ಲಾ ಮಟ್ಟದ ಅಧಿಕಾರಿಗಳು ಹಂಪಿ ಉತ್ಸವದ ಬಗ್ಗೆ ಸಲಹೆಗಳನ್ನು ಮುಕ್ತವಾಗಿ ನೀಡಬಹುದು ಎಂದು ತಿಳಿಸಿದ್ದಾರೆ.

ಈ ವೇಳೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ ಮೋಹಮ್ಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.


ಶಿವಗಣಾರಾಧನೆ



ದಿ|| ಚೀ. ವರುಣ್.ಎಂ. ರೆಡ್ಡಿ

ನಮ್ಮ ಚೀ.... ವರುಣ್.ಎಂ. ರೆಡ್ಡಿ ಇವರು ತಾ: 06/01/2025 ಸೋಮವಾರದಂದು ಬೆಳಿಗ್ಗೆ 10:30 ಗಂಟೆಗೆ ಶಿವಾಧೀನರಾಗಿರುತ್ತಾರೆ. ಹಾಗಾಗಿ ಶಿವಗಣಾರಾಧನೆ ಕಾರ್ಯಕ್ರಮ ತಾ: 10/01/2025 ಶುಕ್ರವಾರ ಮಧ್ಯಾಹ್ನ 12:30 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿದ್ದೇವೆ. ತಾವುಗಳು ಆಗಮಿಸಿ ಮೃತನ ಆತ್ಮಕ್ಕೆ ಶಾಂತಿ ಕೋರಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಸ್ಥಳ:– ಬಸವ ಸದನ, ಕಾಲೇಜ್ ರಸ್ತೆ.
ಡಾ. ಬಿ.ಆರ್ ಅಂಬೇಡ್ಕರ್ ವೃತ್ತದ ಹತ್ತಿರ. ಹೊಸಪೇಟೆ. ವಿಜಯನಗರ ಜಿಲ್ಲೆ.

ಇಂತಿ ದುಃಖ ತಪ್ತರು
ಶ್ರೀಮತಿ ಮತ್ತು ಶ್ರೀ ಡಾ. ಮಹಾಬಲೇಶ್ವರ ರೆಡ್ಡಿ
ಹಾಗೂ ಮೃತರ ಪತ್ನಿ, ಪುತ್ರಿ ಹಾಗೂ ಸಮಸ್ತ ಕುಟುಂಬದವರು.

## ಸ್ಟುಡೆಂಟ್ ಕಾಲಂ

# ಒಂದು ಲೋಟ ನೀರಿನ ಕಥೆ



ಒಂದು ದಿನ ಸುಂದರದತ್ತ ಎಂಬ ರಾಜನು ದಟ್ಟವಾದ ಕಾಡಿಗೆ ಬೇಟೆಯಾಡಲು ಹೊರಟನು. ಅವನು ತನ್ನ ಕುದುರೆಯಲ್ಲಿ ಕುಳಿತು ಹಳ್ಳ–ಕೊಳ್ಳಗಳನ್ನು ದಾಟಿ ಕಾಡನ್ನು ತಲುಪಿದನು. ಅಲ್ಲಲ್ಲಿ ಕಾಣುತಿದ್ದ ನದಿಗಳು ಅವನನ್ನು ಆಕರ್ಷಿಸಿದವು. ಅಲ್ಲಿಯ ಒಂದೊಂದು ಮರವೂ ಸಹ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದವು. ಆ ಸಮಯದಲ್ಲಿ ಹುಲಿಯೊಂದು ರಾಜನನ್ನು ತಿನ್ನಲು ಘರ್ಜಿಸುತ್ತ ನೆಗೆಯಿತು. ಆಗ ರಾಜನು ಬಿಲ್ಲು ಬಾಣಗಳನ್ನು ಹೂಡಿದನು. ಅವು ಆ ಸಮಯದಲ್ಲಿ ನೆಲಕ್ಕೆ ಬಿದ್ದವು. ಹುಲಿಯಿಂದ ತಪ್ಪಿಸಿಕೊಳ್ಳಲು ರಾಜನು ಕಾಡಿನ ಸಿಕ್ಕ ಸಿಕ್ಕ ದಾರಿಯಲ್ಲಿ ಓಡಿದನು.

ಹೀಗೆ ಓಡಿದ ರಾಜನು ಕಾಡು ದಾಟಿ ಒಂದು ಮರುಳುಗಾಡನ್ನು ತಲುಪಿದನು. ಓಡಿ ಬಂದಿದ್ದರಿಂದ ರಾಜನಿಗೆ ದಣಿವಾಗಿತ್ತು. ಕುಡಿಯಲು ನೀರು ಹುಡುಕಿದ. ಮರಳುಗಾಡಿನಲ್ಲಿ ಎಲ್ಲೂ ನೀರು ಕಾಣಲಿಲ್ಲ. ಕುಡಿಯಲು ನೀರು ಇಲ್ಲದೇ ಬಾಯಾರಿಕೆಯಿಂದ ಬಳಲಿದ ರಾಜ ಸುಸ್ತಾಗಿ ಮಲಗಿಬಿಟ್ಟನು. ಅಲ್ಲಿ ಯಾವುದೇ ಜನರಾಗಲೀ, ಮನೆಗಳಾಗಲಿ ಕಾಣಲಿಲ್ಲ.

ಆ ಸಮಯದಲ್ಲಿ ಅಲ್ಲೊಬ್ಬ ದಾರಿಹೋಕ ನೀರಿನ ಮಡಕೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಅವನನ್ನು ಕಂಡ ರಾಜನು ಅವನನ್ನು ಕರೆದು ನೀರು ಕೊಡಲು ಆದೇಶಿಸಿದನು. ರಾಜನ ಅಹಂಕಾರವನ್ನು ಕಂಡ ದಾರಿಹೋಕ ರಾಜನಿಗೆ ಬುದ್ಧಿ ಕಲಿಸಬೇಕೆಂದು ಯೋಚಿಸಿದ. ಒಂದು ಲೋಟ ನೀರಿಗೆ ರಾಜನು ಧರಿಸಿದ್ದ ಆಭರಣಗಳನ್ನೆಲ್ಲ ಕೊಡಬೇಕೆಂದು ಕೇಳಿದನು. ಅದಕ್ಕೆ ರಾಜನು ಒಪ್ಪಲಿಲ್ಲ. ದಾರಿಹೋಕ ನೀರು ಕೊಡದೆ ಹೋದನು. ರಾಜನು ತನ್ನ ಜೀವ ಉಳಿದರೆ ಸಾಕೆಂದು ಆತನನ್ನು ಕೂಗಿ ಕರೆದು ಆಭರಣಗಳನ್ನು ಕೊಡಲು ಒಪ್ಪಿದನು.

ಆಗ ದಾರಿಹೋಕ ಒಂದು ಲೋಟ ನೀರಿಗೆ ರಾಜನ ಅರ್ಧ ರಾಜ್ಯವನ್ನು ಕೇಳಿದನು. ಇದು ಅತಿಯಾಯಿತು ಎಂದು ರಾಜನು ಅವನನ್ನು ಬೈದು 'ಬೇಡ ಬೇಡ' ಎಂದು ಕಳುಹಿಸಿದನು. ದಾರಿಹೋಕ ಹೊರಟನು. ರಾಜನಿಗೆ ತುಂಬಾ ಬಾಯಾರಿಕೆಯಾಗಿತ್ತು. ದಾಹವನ್ನು ತಡೆಯಲಾರದೆ ದಾರಿಹೋಕನನ್ನು ಕೂಗಿ ಕರೆದು ಅರ್ಧ ರಾಜ್ಯವನ್ನು ಕೊಡುವೆನೆಂದು ತಿಳಿಸಿ, ನೀರು ಕೇಳಿದನು.

ಈಗ ದಾರಿಹೋಕನು ಒಂದು ಲೋಟ ನೀರಿಗೆ ಇಡೀ ರಾಜ್ಯವನ್ನೇ ಕೇಳಿದನು. ಕೋಪಗೊಂಡ ರಾಜನು 'ಸತ್ತರು ಸರಿ. ಒಂದೇ ಒಂದು ಲೋಟ ನೀರಿಗೆ ಇಡೀ ರಾಜ್ಯವನ್ನು ಕೊಡುವುದಿಲ್ಲ' ಎಂದು ಹೇಳಿ ಅವನನ್ನು ಕಳುಹಿಸಿದನು. ದಾರಿಹೋಕನು ಮಡಕೆಯ ನೀರನ್ನು ಹೊತ್ತುಕೊಂಡು ಹೊರಟು ಹೋದನು. ಅವನು ಸ್ವಲ್ಪ ದೂರ ಹೋದ ನಂತರ ರಾಜನು ಸಾಯುವ ಸ್ಥಿತಿಗೆ ತಲುಪಿದನು. ತಾನು ಬದುಕಿದರೆ ಸಾಕೆಂದು ಪುನಹ ದಾರಿಹೋಕನನ್ನು ಕೂಗಿ ಕೂಗಿ ಕರೆದನು. ಒಂದು ಲೋಟ ನೀರಿಗೆ ನನ್ನ ಇಡೀ ರಾಜ್ಯವನ್ನೇ ಕೊಡುವೆನೆಂದು ಮಾತು ಕೊಟ್ಟು ಒಂದು ಲೋಟ ನೀರನು ಕುಡಿದನು.

ಆ ನೀರು ಅವನ ಜೀವವನ್ನೇ ಉಳಿಸಿತು. ಅನಂತರ ದಾರಿಹೋಕನು ರಾಜನ್ನು ಕರೆದುಕೊಂಡು ಹೋಗಿ ಅವನ ರಾಜ್ಯಕ್ಕೆ ಬಿಟ್ಟನು. ರಾಜನು ಕಾಡಿನಲ್ಲಿ ನಡೆದ ಘಟನೆಯನ್ನು ಅರಮನೆಯ ಎಲ್ಲರಿಗೂ ಹೇಳಿದನು. ಆಗ ರಾಜನು 'ನನ್ನ ಇಡೀ ರಾಜ್ಯ ಒಂದು ಲೋಟ ನೀರಿಗೆ ಸಮ' ಎಂದು ದಾರಿಹೋಕನಿಗೆ ರಾಜ್ಯವನ್ನು ಕೊಡಲು ಮುಂದಾದನು. ಆದರೆ ದಾರಿಹೋಕನು ಅದನ್ನು ನಿರಾಕರಿಸಿದನು. ನಾನು 'ರಾಜನ ಅಹಂಕಾರವನ್ನು ಇಳಿಸಲು ಮತ್ತು ಒಂದು ಲೋಟ ನೀರು ಎಷ್ಟು ಅಮೂಲ್ಯ ಎಂದು ತಿಳಿಸಲು ಹೀಗೆ ಮಾಡಿದೆ' ಎಂದು ರಾಜನಿಗೆ ಕೈ ಮುಗಿದನು. ಆಗ ರಾಜನಿಗೆ ನೀರು ಎಷ್ಟು ಅಮೂಲ್ಯ ಎಂದು ಅರಿವಾಯಿತು. ಆಗ ರಾಜನು ದಾರಿಹೋಕನನ್ನು ಸನ್ಮಾನಿಸಿ ಅವನಿಗೆ ಕೈತುಂಬಾ ಉಡುಗೊರೆಯನ್ನು ಕೊಟ್ಟನು. ತನ್ನ ರಾಜ್ಯದಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಯೋಜನೆಗಳನ್ನು ಮಾಡಿದನು. 'ನೀರು ಅತ್ಯ ಅಮೂಲ್ಯವಾದದ್ದು ಅದನ್ನು ಮಿತವಾಗಿ ಬಳಸಬೇಕು' ಎಂದು ಹೇಳುತ್ತಾ ಎಲ್ಲರಿಗೂ ನೀರಿನ ಮಹತ್ವನ್ನು ತಿಳಿಸಿದನು.

**– ಎಸ್.ಎಂ. ಸೌಜನ್ಯ. 8ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹಗರಿಬೊಮ್ಮನಹಳ್ಳಿ (ತಾ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಅನುಭವಗಳ ಬೃಹತ್ ಹೆಬ್ಬಾಗಿಲು ಸಾಹಿತ್ಯ



ವೈಜ್ಞಾನಿಕ ವಿಸ್ಮಯಗಳು, ತಂತ್ರಜ್ಞಾನದ ಸುಧಾರಿತ ವಸ್ತುಗಳು ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಇಂದಿನ ಸಮಾಜದಲ್ಲಿ ಸಾಹಿತ್ಯದ ಓದಿನ ಕುರಿತು ಜನರಲ್ಲಿ ಒಂದು ರೀತಿಯ ಅಸಡ್ಡೆಯನ್ನು ನಾವು ಕಾಣುತ್ತಿದ್ದೇವೆ. ಅಯ್ಯೋ! ಪುಸ್ತಕ ಓದುವುದಕ್ಕೆ ಸಮಯ ಎಲ್ಲಿದೆ ರೀ? ನಾವು ತುಂಬಾ ಬ್ಯುಸಿ ಎಂಬಂತೆ ತೋರಿಸಿಕೊಳ್ಳುವ ಜನರೇ ನಮ್ಮಲ್ಲಿ ಬಹಳವಾಗಿದ್ದಾರೆ. ಅರ್ಥಪೂರ್ಣವಾಗಿ ವ್ಯಸ್ತರಾಗಿದ್ದರೆ ಓಕೆ... ಸಮಯ ಸಿಗುವುದಿಲ್ಲ ಎಂದು ಹೇಳಬಹುದು. ಆದರೆ ದಿನದ 18 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಘಟಾನುಘಟಿ ಉದ್ಯಮಿಗಳು, ಆಟಗಾರರು, ಯಶಸ್ವಿ ವ್ಯಕ್ತಿಗಳು ಪುಸ್ತಕದ ಓದು ತಮ್ಮನ್ನು ಹೆಚ್ಚು ಪ್ರೇರೇಪಿಸುತ್ತದೆ ಎಂದು ಹೇಳುವುದನ್ನು ನಾವು ಅಲ್ಲಲ್ಲಿ ಕೇಳಿಯೇ ಇದ್ದೇವೆ. ಅವರಷ್ಟು ನಾವು ವ್ಯಸ್ತರಾಗಿಲ್ಲವಲ್ಲ ಎಂದು ಯೋಚಿಸಿದಾಗ ಕನಿಷ್ಠ ದಿನಕ್ಕೆ ಎರಡು ಮೂರು ಪುಟಗಳಷ್ಟಾದರೂ ಗಂಭೀರವಾದ ಓದಿನಲ್ಲಿ ತೊಡಗಿಸಿಕೊಳ್ಳುವ ಅವಶ್ಯಕತೆ ಇದೆ.

ಇತ್ತೀಚೆಗೆ ಪೇಸ್ಬುಕ್ ನಲ್ಲಿ ಓರ್ವ ಹೆಣ್ಣು ಮಗಳು ತನ್ನ ಮನೆ ಕೆಲಸ ಆಫೀಸ ಕೆಲಸ, ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತ ಒಂದು ವರ್ಷದಲ್ಲಿ ಮುನ್ನೂರ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಓದಿರುವುದಲ್ಲದೆ ಅವುಗಳ ಕುರಿತು ಪ್ರತಿದಿನ ಲೇಖನಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ ಎಂದರೆ ಅವರ ಓದಿನ ಮತ್ತು ಬರಹದ ತೀವ್ರತೆ ಎಷ್ಟಿರಬಹುದು ಎಂದು ಊಹಿಸಿ! ಬಹುಶಃ ಮನುಷ್ಯ ಬಯಸಿದ್ದೇ ಆದರೆ ಅಸಾಧ್ಯ ಎಂಬುದು ಯಾವುದೂ ಇಲ್ಲ ಎಂಬುದಕ್ಕೆ ಮೇಲಿನ ವ್ಯಕ್ತಿ ಉದಾಹರಣೆಯಾಗಿ ಕಾಣಸಿಗುತ್ತಾರೆ.

ನಮ್ಮ ಬದುಕಿನ ನೂರಾರು ಪ್ರಶ್ನೆಗಳಿಗೆ ಉತ್ತರ ಸಾಹಿತ್ಯ ಪುಸ್ತಕಗಳಲ್ಲಿದೆ, ನಮ್ಮ ಜ್ಞಾನದ ದಾಹವನ್ನು ತಣಿಸುವ, ರೋಚಕ ವಿಷಯಗಳಿಂದ ಮನರಂಜಿಸುವ, ನುಡಿದಂತೆ ನಡೆದು ಸಮಾಜವನ್ನು, ನಾಡನ್ನು ಕಟ್ಟಿದ ತಮ್ಮ ಬದುಕನ್ನೇ ಮುಡಿಪಾಗಿಸಿದ ಸಹಸ್ರ ಲಕ್ಷ ಜನರ ಬದುಕನ್ನು ಬದುಕುವ, ಆತ್ಮಾವಲೋಕನ ಮಾಡಿಕೊಳ್ಳುವ, ಅವರೊಂದಿಗೆ ಏಕತ್ರವಾಗಿ ಜೀವಿಸುವ ಅವಕಾಶ ನಮಗೆ ದೊರೆಯುವುದು ಸಾಹಿತ್ಯದಿಂದಲೇ.

ಜಗತ್ತಿನ ಎಲ್ಲ ಜಂಜಡಗಳನ್ನು ಮರೆಸುವ ಶಕ್ತಿ, ತನ್ನೊಳಗೆ ತಾದಾತ್ಮಗೊಳಿಸುವ, ಮನದ ನೋವು, ಸಂಕಟ ಕ್ಲೇಶಗಳನ್ನು ಮರೆಸುವ, ಅತಿಯಾದ ಸಂತಸ ಸಂಭ್ರಮಗಳನ್ನು ನಿರ್ಲಿಪ್ತವಾಗಿ ಸ್ವೀಕರಿಸುವ ಮನಸ್ಥಿತಿಗೆ ನಮ್ಮನ್ನು ಒಡ್ಡಿಕೊಳ್ಳುವಂತೆ ಮಾಡುವ ಶಕ್ತಿ ಸಾಹಿತ್ಯಕ್ಕೆ ಇದೆ.

ಸಾಹಿತ್ಯ ಎಂದರೆ ಕೇವಲ ಕಪೋಲ ಕಲ್ಪಿತ ಕಥೆ ಕವನಗಳ ಗುಚ್ಛವಲ್ಲ. ಪುಸ್ತಕಗಳ ಸಂಗ್ರಹವಲ್ಲ, ಅತಿ ಮಾನುಷ ಕ್ರಿಯೆಗಳ ವರದಿಯಲ್ಲ. ಮಾನವ ಬದುಕಿನ ಅನುಭವಗಳ ಬೃಹತ್ ಹೆಬ್ಬಾಗಿಲು ಸಾಹಿತ್ಯವಾಗಿದೆ. ನಮ್ಮ ಸುಖ ದುಃಖ ನೋವು ನಲಿವುಗಳ ಕನ್ನಡಿ ಸಾಹಿತ್ಯ ಎಂದರೆ ತಪ್ಪಿಲ್ಲ.

ಸಾಹಿತ್ಯ ಎಂದರೇನು? ಬದುಕಿನ ಮೌಲ್ಯಗಳನ್ನು ಕಟ್ಟಿಕೊಡುವಲ್ಲಿ ಸಾಹಿತ್ಯದ ಪಾತ್ರ ಏನು ಎಂದು ನಾವು ಕೇಳಿಕೊಳ್ಳುವುದಾದರೆ ಸಾಹಿತ್ಯ ಎಂದರೆ ಕೇವಲ ಬರೆದು ಎತ್ತಿರಿಸಿದ ಪದಗಳ ಗುಚ್ಛವಲ್ಲ, ಅನುಭವಿಸಿದ ನೋವುಗಳ ಕಥನವಲ್ಲ, ಪ್ರೀತಿ ಪ್ರೇಮದ ಕಾವ್ಯ, ಕವನಗಳಲ್ಲ, ಯುದ್ಧಭೀತಿ, ರೋಗ ಬಾಧೆಯ ವರ್ಣನೆ ಅಲ್ಲ, ಜ್ಞಾನ ಪ್ರಸಾರದ ವೈಜ್ಞಾನಿಕ ಕೌತುಕಗಳ ಮಾಹಿತಿ ಅಲ್ಲ .... ಆದರೆ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಅವೆಲ್ಲವನ್ನು ಒಳಗೊಂಡ ನಮ್ಮನ್ನು ನಾವು ಸುಂದರವಾಗಿ, ಆಳವಾಗಿ, ಮನಮುಟ್ಟುವ ಹಾಗೆ ಅಭಿವ್ಯಕ್ತಿಸುವ ಮಾಧ್ಯಮ. ನಮ್ಮೊಳಗನ್ನು ಮುಕ್ತವಾಗಿ ತೆರೆದಿಡುವ ಒಂದು ಕಲೆ ಸಾಹಿತ್ಯ. ಎಲ್ಲರಿಗೂ ಈ ಕಲೆ ಒಲಿಯುವುದಿಲ್ಲ ಒಲಿದವರು ಇನ್ನಿಲ್ಲದಂತೆ ನಿರಂತರ ಶ್ರದ್ಧೆಯಿಂದ ಈ ಕಲೆಯನ್ನು ಬದುಕಿನ ಭಾಗವನ್ನಾಗಿ ಸಿಕೊಳ್ಳಲೇಬೇಕು ಎಂಬಂತಹ ಅತ್ಯಾಪ್ತತೆ ಮೂಡಿಸುವ ಈ ಕಲೆ, ಸಾಹಿತ್ಯವಿಲ್ಲದೆ ಬದುಕಿಲ್ಲ ಎಂಬ ಸತ್ಯವನ್ನು ಅನಾವರಣ ಗೊಳಿಸುತ್ತದೆ. ಈ ಕಲೆಯ ಮಾಧ್ಯಮ ಕಥೆ, ಕವನ, ಕಾವ್ಯ, ಪುರಾಣ, ಭಾಗವತ, ನಾಟಕ, ಗದ್ಯ, ಪದ್ಯ, ಜಾನಪದ ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಹರಡಿದೆ

**ಸಾಹಿತ್ಯವನ್ನು ಓದುವು ದರಿಂದ ಆಗುವ ಪ್ರಯೋಜನಗಳು...**

ಇತಿಹಾಸದಲ್ಲಿ ನಡೆದು ಹೋದ ಘಟನೆಗಳು ಕಣ್ಣಿಗೆ ಕಟ್ಟುವಂತೆ ಕಟ್ಟುವಂತೆ ವಿವರಿಸಲ್ಪಟ್ಟಿದ್ದು ನಡೆದು ಹೋದ ಘಟನೆಗಳ ಪರಾಮರ್ಶೆಗೆ, ಗತಕಾಲದ ಇತಿಹಾಸದ ವೈಭವದ ಜೊತೆ ಜೊತೆಗೆ ನಮ್ಮನ್ನು ಆಳಿದ ರಾಜ ಮಹಾರಾಜರ ಕಾಣಿಕೆಗಳು ಜನಸಾಮಾನ್ಯರ ಜೀವನ ಶೈಲಿಗಳು, ವಾಸ್ತುಶಿಲ್ಪ, ಸಂಗೀತ, ಸಾಹಿತ್ಯ ಮುಂತಾದ ಕಲೆಗಳಿಗೆ ಅವರು ನೀಡಿರುವ ಪ್ರಾಮುಖ್ಯತೆಗಳನ್ನು ನಾವು ಅರಿಯುತ್ತೇವೆ..

ವಿಭಿನ್ನ ಕಾಲಮಾನಗಳಲ್ಲಿ ಜನರು ಬದುಕಿದ ರೀತಿ ನೀತಿಗಳನ್ನು ಅಳವಡಿಸಿಕೊಂಡ ಮೌಲ್ಯಗಳ ಅಧ್ಯಯನದ ಜೊತೆ ಜೊತೆಗೆ ಜೀವನ ಶೈಲಿಯ ಕುರಿತ ಅರಿವು ಮೂಡುತ್ತದೆ.

ಸಾಹಿತ್ಯವನ್ನು ಓದುವಾಗ ವ್ಯಕ್ತಿಯು ತಾನು ಓದುತ್ತಿರುವ ಕೃತಿಯ ಭಾವಗಳನ್ನು ತಾನೇ ಅನುಭವಿಸುವ ಮೂಲಕ ಮಾನವೀಯ ಸಂವೇದನೆಗಳನ್ನು ಅರಿಯುತ್ತಾನೆ. ಇಂಗ್ಲಿಷ್ ನಲ್ಲಿ ಹೇಳುವಂತೆ 'ಸ್ಟೆಪ್ಪಿಂಗ್ ಇನ್ ಟು ಅದರ್ಸ್ ಶೂಸ್' ಎಂಬಂತೆ ಬೇರೆಯವರು ಅನುಭವಿಸುವ ಭಾವನೆಗಳ ತಾಕಲಾಟಗಳನ್ನು, ಬದುಕಿನ ಕುರಿತಾದ ಗ್ರಹಿಕೆಗಳನ್ನು ಖುದ್ದು ತಾನೇ ಅನುಭವಿಸುತ್ತಾನೆ. ಇದು ಸಂಕೀರ್ಣವಾದ ಜಗತ್ತಿನಲ್ಲಿ ಬದುಕಲು ಅವಶ್ಯಕವಾದ ಉನ್ನತ ಮೌಲ್ಯಗಳಾದ ಧೈರ್ಯ, ನಂಬಿಕೆ, ಆತ್ಮವಿಶ್ವಾಸ, ಕರುಣೆ, ಪ್ರೀತಿ, ಮಮತೆ, ಮಮಕಾರ ಮತ್ತು ಸಹಾನುಭೂತಿಯನ್ನು ಸೃಷ್ಟಿಸುತ್ತದೆ.

ದೃಷ್ಟಿಕೋನದಲ್ಲಿನ ಬದಲಾವಣೆ... ಯಾವುದೇ ಒಂದು ವಿಷಯವನ್ನು ಹಲವಾರು ದೃಷ್ಟಿಕೋನಗಳಿಂದ ಅರಿಯುವ ಮೂಲಕ ತನ್ನ ಗ್ರಹಿಕೆಯ ಹರಹನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪುಸ್ತಕದ ಓದಿನಲ್ಲಿ ಮುಳುಗಿರುವಂತೆಯೇ ನಾವು ಸಮಯ ಕಾಲವನ್ನು ಮೀರಿದ ವಸ್ತು ವಿಷಯಗಳನ್ನು ಅರಿಯಲು ಮಾನಸಿಕವಾಗಿ ವಿಭಿನ್ನ ಪರಿಸರದಲ್ಲಿ ಪಯಣಿಸಿರುತ್ತೇವೆ. ವೈವಿಧ್ಯಮಯ ಸಂಸ್ಕೃತಿಯ ಅಧ್ಯಯನ ಮಾಡಿರುತ್ತೇವೆ, ಚಿತ್ರ ವಿಚಿತ್ರ ಸನ್ನಿವೇಶಗಳನ್ನು ಎದುರಿಸಿರುತ್ತೇವೆ, ಪ್ರೀತಿ ಪ್ರೇಮದ ಹೊಳೆಯಲ್ಲಿ ಮುಳುಗೇಳುತ್ತೇವೆ, ಸರಿ ತಪ್ಪುಗಳ ಚಿಂತನ ಮಂಥನದ ಜೊತೆಗೆ ವಿಭಿನ್ನ ದೃಷ್ಟಿಯ ಗ್ರಹಿಕೆಗಳನ್ನು ನಮ್ಮದಾಗಿಸಿಕೊಳ್ಳುತ್ತೇವೆ. ಇದು ನಮ್ಮ ಬದುಕನ್ನು ವಿಶಾಲವಾದ ದೃಷ್ಟಿಕೋನದಿಂದ ಗ್ರಹಿಸಲು ಸಾಧ್ಯವಾಗುತ್ತದೆ. ಬದುಕು ನಮಗೆ ಒಡ್ಡುವ ಸವಾಲುಗಳನ್ನು ಎದುರಿಸಲು, ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸಲು ಸಾಹಿತ್ಯದ ಓದುವಿಕೆ ನಮಗೆ ಸಹಾಯಕವಾಗುತ್ತದೆ.

ಓದುವಿಕೆ ನಮಗೆ ವಿಭಿನ್ನ ರೀತಿಯಲ್ಲಿ ಯೋಚಿಸುವ ಶಕ್ತಿಯನ್ನು ಉದ್ದೀಪಿಸುತ್ತದೆ. ವಿವಿಧ ರೀತಿಯ ಸಾಹಿತ್ಯವನ್ನು ಓದುವಾಗ ಸಾಹಿತ್ಯದ ಅಂತಃಸ್ಸತ್ವ ಅರಿವಾಗುತ್ತದೆ. ವಿವಾದಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವಿಮರ್ಶೆ ಮಾಡಲು, ಚಿಂತನೆಗೊಳಪಡಿಸು ತ್ತದೆ. ಈ ರೀತಿಯ ವಿಮರ್ಶಾತ್ಮಕ ಚಿಂತನೆ ಬದುಕಿನ ಎಲ್ಲ ಭಾಗಗಳಲ್ಲಿಯೂ ಅಧ್ಯಯನ ಪೂರ್ಣವಾಗಿದ್ದು ಅತ್ಯುಪಯುಕ್ತವಾಗಿರುತ್ತದೆ.

ಸಾಹಿತ್ಯದ ಓದು ನಮ್ಮ ಬದುಕನ್ನು ಸಮೃದ್ಧವಾಗಿಸುತ್ತದೆ.... ಮನರಂಜನೆಯ ಸ್ಫೂರ್ತಿ ಮತ್ತು ಅತ್ಯದ್ಭುತ ಸೌಂದರ್ಯವನ್ನು ಹೊಂದಿರುವ ಸಾಹಿತ್ಯವು ನಮಗೆ ಸಂತಸ, ಪ್ರೀತಿ, ಕರುಣೆಯ ಸಮ್ಮಿಶ್ರ ಭಾವಗಳನ್ನು ಹೊಂದುವಂತೆ ಮಾಡಿ ನಮ್ಮ ಚಿಂತನಾ ಶಕ್ತಿಯನ್ನು, ಆಂತರಿಕ ಸಾಮರ್ಥ್ಯವನ್ನು ಸಮೃದ್ಧಗೊಳಿಸುತ್ತದೆ. ಸಾಹಿತ್ಯದ ಓದು ಸಮಯವನ್ನು ವ್ಯರ್ಥಗೊಳಿಸುವುದಿಲ್ಲ... ನಮ್ಮ ವೈಯಕ್ತಿಕ ಬೆಳವಣಿಗೆ ಮತ್ತು ಅರ್ಥೈಸುವಿಕೆಗೆ ನಮ್ಮ ಸಮಯದ ಹೂಡಿಕೆಯ ಕುರಿತು ಅರಿವು ಮೂಡಿಸುತ್ತದೆ.

ಸಾಹಿತ್ಯದ ಓದು ನಮಗೆ ವೈವಿಧ್ಯಮಯ ವಿಷಯಗಳ ಕುರಿತ ಸಾಕಷ್ಟು ಮಾಹಿತಿಯನ್ನು ನೀಡುತ್ತದೆ. ಸಾಹಿತ್ಯದ ಓದು ನಮ್ಮ ಬದುಕಿನಲ್ಲಿ ಎಲ್ಲವನ್ನು ಎಲ್ಲರನ್ನೂ ಅವರಿರುವಂತೆಯೇ ಗ್ರಹಿಸಿ ಒಪ್ಪಿಕೊಳ್ಳಲು ಅನುವು ಮಾಡಿಕೊಡುತ್ತದೆ. ಸಾಹಿತ್ಯ ನಮ್ಮ ಬದುಕಿನ ಕಣಕಣಗಳಲ್ಲೂ ಸಮೃದ್ಧ ವೈಚಾರಿಕ ಅನುಭವವನ್ನು ತುಂಬಿ ರಕ್ತ, ಮಾಂಸ, ಮಜ್ಜೆಗಳನ್ನು ಒಳಗೊಂಡ ಶರೀರವನ್ನು ಪ್ರೀತಿ, ಪ್ರೇಮ, ಮಮತೆ, ವಾತ್ಸಲ್ಯ, ಕರುಣೆ ಮುಂತಾದ ಉನ್ನತ ಮೌಲ್ಯ ಭಾವಗಳನ್ನು ಒಳಗೊಂಡ ವಿಶ್ವ ಮಾನವನನ್ನಾಗಿಸುತ್ತದೆ.

ಆದ್ದರಿಂದ ಸ್ನೇಹಿತರೆ, ಪುಸ್ತಕ ನಮ್ಮ ಆತ್ಮಸಖ, ನಮ್ಮ ನೋವುಗಳನ್ನು ಮರೆಸುವ, ನಮ್ಮ ಅಪರಿಮಿತ ಸಂತಸಕ್ಕೆ ತಿಳುವಳಿಕೆಯ ಮೂಲಕ ನಿರ್ಲಿಪ್ತಿಯ

ಕವಚ ತೊಡಿಸುವ ಬದುಕಿನ ಹಲವು ಮುಖಗಳನ್ನು ತೋರಿಸುವ ಆತ್ಮ ಸಂಗಾತಿ. ಇಂತಹ ಸಾಹಿತ್ಯದ ಓದು ನಮ್ಮ ನಿಮ್ಮೆಲ್ಲರ ಬದುಕನ್ನು ಸಮೃದ್ಧಗೊಳಿಸಲಿ ಎಂಬ ಆಶಯದೊಂದಿಗೆ

## ಅಂತರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಬನ್ನಿಗೋಳ ಗ್ರಾಮದ
# ಮಾರುತೇಶಗೆ ಚಿನ್ನದ ಪದಕ

**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಬನ್ನಿಗೋಳ ಗ್ರಾಮದಲ್ಲಿ ಮಲೇಷಿಯಾದಲ್ಲಿ ನಡೆದ ಅಂತರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಯಲ್ಲಿ ವಿಜೇತರಾದ ಬಿ.ಮಾರುತೇಶ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.



ಬನ್ನಿಗೋಳ ಗ್ರಾಮಸ್ಥರು ಮಾರುತೇಶ ಇವರನ್ನು ತೆರದ ವಾಹನದಲ್ಲಿ ವಿವಿಧ ವಾದ್ಯಗೋಷ್ಠಿಗಳೊಂದಿಗೆ ಗ್ರಾಮದ ಮುಖಂಡರು, ಹಿರಿಯರು ಮೆರವಣಿಗೆ ನಡೆಸಿದರು. ದಾರಿಯುದಕ್ಕೂ ಯುವಕರು ಹೂ ಎರಚಿ ಜಯಘೋಷ ಹಾಕಿದರು. ದೇಹದಾರ್ಢ್ಯಪಟು ಮಾರುತೇಶ್ ಸನ್ಮಾನ ಸ್ವೀಕರಿಸಿ ಮಾತನಾಡಿ, ನಿರಂತರ ಪರಿಶ್ರಮ, ಶ್ರದ್ಧೆ ಮತ್ತು ತಾಳ್ಮೆಯಿಂದ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ಯುವಕರು ದುಶ್ಚಟಗಳಿಂದ ದೂರವಿದ್ದು ದೇಶಕ್ಕೆ ಉತ್ತಮ ಕೊಡುಗೆಯನ್ನು ನೀಡ ಬೇಕು. ಮಲೇಷಿಯಾದ ರಾಜಧಾನಿಯಲ್ಲಿ ನಡೆದ ಸ್ಪರ್ಧೆಯಲ್ಲಿ 90 ಕೆ.ಜಿ. ಮೇಲ್ಪಟ್ಟ ವಿಭಾಗದಲ್ಲಿ 342 ಪಟುಗಳನ್ನು ಹಿಂದಿಕ್ಕಿ ಚಿನ್ನದ ಪದಕಗಳಿಸುವಲ್ಲಿ ಬನ್ನಿ ಗೋಳ ಗ್ರಾಮಸ್ಥರ ಸಹಕಾರ ಪ್ರಮುಖವಾಗಿದೆ ಎಂದರು.

ಹಂಪಸಾಗರ ನವಲಿ ಹಿರೇಮಠದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸಾನ್ನಿಧ್ಯವಹಿಸಿ ಮಾತನಾಡಿ, ಮಾರುತೇಶ ನಿರಂತರ ಅಭ್ಯಾಸ, ಸಮತೋಲ ಆಹಾರ ಸೇವನೆ ಮೂಲಕ ಇಂದು ಗ್ರಾಮದ ಕೀರ್ತಿ ಹೆಚ್ಚಿಸಿದ್ದಾನೆ. ಗ್ರಾಮದ ಅಪೌಷ್ಠಿಕ ಮಕ್ಕಳ ಸಾಲಿನಲ್ಲಿದ್ದ ಮಾರುತೇಶ ಇದೀಗ ದೇಶದ ಬೆರಳೆಣಿಕೆಯ ಉತ್ತಮ ದೇಹದಾರ್ಢ್ಯ ಪಟುಗಳ ಸಾಲಿನಲ್ಲಿ ಗುರುತಿಸಿಕೊಂಡಿರುವುದು ಪ್ರೇರಕ ಶಕ್ತಿಯಾಗಬೇಕಿದೆ. ದೇಹದಾರ್ಢ್ಯ ಪಟುಗಳಿಗೆ ಸರಕಾರ ಅಗತ್ಯ ನೆರವು ನೀಡಬೇಕಿದೆ ಎಂದರು.

ಇದೇವೇಳೆ ಗ್ರಾಮದ ಹಿರಿಯ ಮುಖಂಡ ಹ್ಯಾಟಿ ಆನಂದರೆಡ್ಡಿ ಮಾರುತೇಶ ಸಾಧನೆಗೆ ಮೆಚ್ಚಿ ಸನ್ಮಾನಿಸಿ 5ಸಾವಿರ ರೂ.ಬಹುಮಾನ ನೀಡಿದರು. ಅಂಬಿಗರ ಗಿರೀಶ್, ನಾಗರಾಜ ಕಾರ್ಯಕ್ರಮಕ್ಕೆ ಸಹಕಾರ ನೀಡಿದ್ದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಮೂಲಿಮನಿ ರವಿಪ್ರಸಾದ್, ಅಂಬಿಗರ ಸಿದ್ದಪ್ಪ, ಅನಾಳಪ್ಪ ಗಡಿಗಿ, ರುದ್ರೇಶ ಬಲ್ಲಾಹುಣಿಸಿ, ಮಾಬುಸಾಬ್, ಖಾಜಾವಲಿ, ಮರಿಯಪ್ಪ, ಮೈಲಪ್ಪ, ಆನಂದೇವನಹಳ್ಳಿ ದೊಡ್ಡಬಸಪ್ಪ, ಸಿಗೇನಹಳ್ಳಿ ಬಸವರೆಡ್ಡಿ, ನಾಗರೆಡ್ಡಿ, ಗ್ರಂಥಪಾಲಕ ಮಂಜುನಾಥ, ಶ್ರೀನಿವಾಸ, ಮಾರುತಿ ಚಿಗರಿ, ಟಿ.ಹರೀಶ್, ಪಕ್ಕೀದ ಬಸವರಾಜ, ರಾಮಚಂದ್ರಪ್ಪ, ಮಡಿವಾಳರ ಹನುಮಂತಪ್ಪ, ಎಚ್.ಕೊಟ್ರೇಶ, ಅಂಬಿಗರ ಮೌನೇಶ್, ನವಲಿ ದೇವರಾಜ, ಉಪ್ಪಾರ ಶ್ರೀನಿವಾಸ ಇತರರಿದ್ದರು.

# ಮಕ್ಕಳೆಂಬ ಗಾಳಿಪಟ

ಮಗು ಹುಟ್ಟಿದ ಕ್ಷಣದಿಂದ ಪೋಷಕರಲ್ಲಿ ಮಕ್ಕಳ ಭವಿಷ್ಯದ ಬಗೆಗಿನ ಕನಸು ಸಹ ಬೆಳೆಯುತ್ತದೆ. ಹೆತ್ತ ಮಕ್ಕಳು ಕಷ್ಟಪಡದೆ ಅವರ ಜೀವನ ಇಷ್ಟಪಟ್ಟಂತೆ ಬಾಳಲು ಏನೆಲ್ಲಾ ತ್ಯಾಗ ಮಾಡುವರು ಪೋಷಕರು. ಒಂದು ಹೆಜ್ಜೆ ಮುಂದೆ ಹೋಗಿ ಅವರಿಗೆ ಅನವಶ್ಯಕ ಸಲಿಗೆಗಳನ್ನು ಕೊಟ್ಟು, ಮಕ್ಕಳು ಹೆತ್ತವರ ಮತ್ತು ಮನೆಯ ಪರಿಸ್ಥಿತಿ ಸಹ ಅರ್ಥ ಮಾಡಿಕೊಳ್ಳದೆ ವರ್ತಿಸುವಂತೆ ಮಾಡುತ್ತಿದೆ.



ಬರೀ ಹಣಕಾಸಿನ ವಿಚಾರವಾಗಿ ಮಾತ್ರವಲ್ಲ, ಅವರ ಒಡನಾಟ ಇರುವ ಮಕ್ಕಳ ವರ್ತನೆ. ಅವರು ದಿನನಿತ್ಯ ವ್ಯವಹರಿಸುವ ವ್ಯಕ್ತಿಗಳು, ಪರಿಸರ ಎಲ್ಲವನ್ನೂ ಪೋಷಕರು ಎಷ್ಟೇ ಕೆಲಸದ ಒತ್ತಡವಿದ್ದರೂ ಹಿಂಬಾಲಿಸುವುದು ಅಷ್ಟೇ ಮುಖ್ಯವಾಗಿದೆ.

ಕೆಲವೊಮ್ಮೆ ಅತಿಯಾದ ಸ್ವಾತಂತ್ರ್ಯ ಅವರ ಅಳಿವಿಗೆ ಕಾರಣವಾಗದಿರಲಿ.

ಮಕ್ಕಳು ಬಾನಿನಲ್ಲಿರುವ ಗಾಳಿಪಟದಂತೆ ಮುಕ್ತವಾಗಿ ಹಾರಿ ಉತ್ತುಂಗದಲ್ಲಿ ರಾರಾಜಿಸುವ ಕನಸು ಎಲ್ಲ ಪೋಷಕರದು. ಆದರೆ, ಗಾಳಿಪಟದ ಸೂತ್ರ ಎಲ್ಲಿಯವರೆಗೆ ನಮ್ಮ ಕೈಯ ಹಿಡಿತದಲ್ಲಿ ಇರುವುದೋ ಅಲ್ಲಿಯವರೆಗೆ ಅದಕ್ಕೆ ಯಾವುದೇ ತೊಂದರೆ ಇಲ್ಲದೆ ನೀಲ ಆಗಸದಲ್ಲಿ ಹಾರುತ್ತಿರುತ್ತದೆ.

ಒಮ್ಮೆ ಮಕ್ಕಳು ನಮ್ಮ ಕಣ್ಣ ತಪ್ಪಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ತಪ್ಪು ಹೆಜ್ಜೆ ಇಟ್ಟು ತಮ್ಮನ್ನು ತಾವು ಸೂತ್ರ ಹರಿದ ಗಾಳಿಪಟದಂತೆ ಭವಿಷ್ಯದಲ್ಲಿ ದಿಕ್ಕುದೆಸೆಯಿಲ್ಲದೆ ಯಾರದೋ ಕದಂಬ ಬಾಹುಗಳಲ್ಲಿ ಸಿಲುಕಿಕೊಳ್ಳದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದು ಎನ್ನುವುದು ಮರೆಯಬಾರದು.

ಸ್ವಾತಂತ್ರ್ಯ ಖಂಡಿತ ಎಲ್ಲರಿಗೂ, ಎಲ್ಲ ರೀತಿಯಲ್ಲೂ ಸಿಗಬೇಕು ಆದರೆ ಅದು ದುರುಪಯೋಗವಾಗಬಾರದು ಎನ್ನುವುದು ಅಭಿಲಾಷೆ.

**– ಮಂಜುಶ್ರೀ ಮುರಳೀಧರ್.**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಧಮನಿತರ ದನಿಯಾದ

ಧಮನಿತರ ದನಿಯಾದ
ಅಂತಂತ ಮಹನೀಯರ
ದನಿಯನ್ನೇ ಅಡಗಿಸಿದ ನಾಡೆಮ್ಮದು.....

ಹಕ್ಕು ಕೇಳಿದರಿಲ್ಲಿ
ಸೊಕ್ಕು ಬಹಳೆಂಬುವರು
ಸುಕ್ಕುಗಟ್ಟೇ ಇರಲು ಬಯಸುವರು
ಜಾಸ್ತಿ.....

ಪಕ್ಕದಲಿ ನಿಂತವರೆ
ಕುಕ್ಕುವರು ಮರೆಯದಿರು
ಇಕ್ಕಳಕೆ ಸಿಕ್ಕಂತ ಅಡಕೆಯಂತೆ.....

ನನ್ನನ್ನು ನಿನ್ನನ್ನು
ಅವನನ್ನು ಇವನನ್ನು
ಯಾರನ್ನು ಬಿಡುವರೋ ಮರ್ತ್ಯದಾಗ..

ಬಾಗುತ್ತ ಸಾಗೋಣ
ಮಾಗುತ್ತ ಬೆಳೆಯೋಣ
ಅಂತವಗೆ ನೆಲೆ ಐತೆ ಹೃದಯದಾಗ....

ಭ್ರಮೆಯು ಬೇಡವೇ ಬೇಡ
ಭ್ರಮರವಾಗಿರು ತಮ್ಮ
ಕುಸುಮದೊಳು ಮಕರಂದ ತುಂಬಾ
ಐತೆ...

ನೀತಿ ನೀತಿಯ ನಡುವೆ
ಸ್ಪರ್ಧೆಯಿರೆ ಬಲು ಚಂದ
ಜೇನೆಲ್ಲವೂ ಮಧುವ ಕಲೆಸಿದಂತೆ....

ಆಯಿತಾಯಿತು ಇರಲಿ
ಒಳಿತು ಮುಂದೆ ಬರಲಿ
ಅಂತರಾತ್ಮದ ಜ್ಯೋತಿ ಬೆಳಗುತಿರಲಿ......

– ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಗೆದ್ದಲಗಟ್ಟಿ–ಕೂಡ್ಲಿಗಿ

# ಬ್ಯಾಡ್- ಗುಡ್ ಟಚ್ ಅರಿವು ಮೂಡಿಸಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ | ಅಧಿಕಾರಿಗಳು ಬಾಲ್ಯ ವಿವಾಹ ತಡೆಯಬೇಕು



■ **ಹಂಪಿ ಟೈಮ್ಸ್ ಬಳ್ಳಾರಿ**

ಮಹಿಳಾ ಅಭಿವೃದ್ಧಿ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗಿ ಕಂಡುಬರುವ ಸಮುದಾಯಗಳಲ್ಲಿ ಅದರಿಂದಾಗುವ ದುಷ್ಪರಿಣಾಮ ಕುರಿತು ಹೆಚ್ಚಿನ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ಬುಧವಾರ, ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದಾಗ ಅಧಿಕಾರಿಗಳು ಪೊಲೀಸರು ಹಾಗೂ ಇತರೆ ಇಲಾಖೆ ಅಧಿಕಾರಿಗಳ ಸಹಕಾರ ಪಡೆದು ಬಾಲ್ಯ ವಿವಾಹ ತಡೆಗಟ್ಟಬೇಕು. ಈ ಕುರಿತು ಅಧಿಕಾರಿಗಳು ಸಮನ್ವತೆ ಸಾಧಿಸಬೇಕು ಎಂದು ಅವರು ತಿಳಿಸಿದರು.

ಶಾಲಾ ಕಾಲೇಜುಗಳಲ್ಲಿ ಪೋಕ್ಸೋ ಕಾಯ್ದೆ ಕುರಿತು ಅರಿವು ಮೂಡಿಸಬೇಕು. ಪೊಲೀಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಶಾಲೆಗಳಲ್ಲಿ ಮಕ್ಕಳ ಸಹಾಯವಾಣಿ, ಪೋಕ್ಸೋ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಬಾಲ ಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಮತ್ತಿತರ ವಿಷಯಗಳ ಬಗ್ಗೆ ತಿಳಿಸಬೇಕು ಎಂದರು.

ಶಾಲೆಯಲ್ಲಿ ಮಕ್ಕಳು ತಮ್ಮ ಮೇಲಿನ ದೌರ್ಜನ್ಯವನ್ನು ಹೇಗೆ ತಡೆಗಟ್ಟಬಹುದು. ಬ್ಯಾಡ್ ಟಚ್ ಅಂದರೇನು? ಗುಡ್ ಟಚ್ ಅಂದರೇನು? ಯಾರಾದಾರೂ ಬ್ಯಾಡ್ ಟಚ್ ಮಾಡಿದರೆ ಅದನ್ನು ಹೇಗೆ ಗುರುತಿಸಬೇಕು. ಅವುಗಳನ್ನು ತಡೆಗಟ್ಟಲು ಮಕ್ಕಳು ಏನು ಮಾಡಬೇಕು ಎಂಬುದರ ಮಾಹಿತಿ ಮಕ್ಕಳಿಗೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಡಿಡಿಪಿಐ ಅಧಿಕಾರಿಗಳಿಗೆ ತಿಳಿಸಿದರು.

ಪೋಷಕರು ಇಲ್ಲದ ಮಕ್ಕಳನ್ನು ಗುರುತಿಸಿ, ಸರ್ಕಾರಿ ಬಾಲ ಮಂದಿರದಲ್ಲಿ ದಾಖಲಾತಿ ಪಡೆದುಕೊಳ್ಳಬೇಕು. ಅಂತಹ ಮಕ್ಕಳು ಕಂಡುಬಂದಲ್ಲಿ ಸರ್ಕಾರಿ ಬಾಲ ಮಂದಿರಕ್ಕೆ ನೋಂದಾಯಿಸಲು ಸಾರ್ವಜನಿಕರಲ್ಲಿ ಮನವರಿಕೆ ಮಾಡಿಕೊಡಬೇಕು ಎಂದು ಹೇಳಿದರು.

ದೈಹಿಕ ಹಾಗೂ ಮಾನಸಿಕವಾಗಿ ಕೌಟುಂಬಿಕ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗಾಗಿ ಮಹಿಳಾ ಸಂರಕ್ಷಣೆ ಅಧಿನಿಯಮ 2005 ಕಾಯ್ದೆ ಜಾರಿಯಲ್ಲಿದ್ದು, ಈ ಕಾಯ್ದೆ ಕುರಿತು ಗ್ರಾಮಾಂತರ ಪ್ರದೇಶದವರಿಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕು ಎಂದರು.

ಶೋಷಣೆಗೆ ಒಳಗಾಗುವ ಮಹಿಳೆಯರ ಸಮಸ್ಯೆಗಳನ್ನು ಕೌನ್ಸಲಿಂಗ್ ಮೂಲಕ ಬಗೆಹರಿಸಲು ಪ್ರಯತ್ನಿಸಬೇಕು ಎಂದು ಹೇಳಿದ ಅವರು, ಈ ಕಾಯ್ದೆ ಬಗ್ಗೆ ಗ್ರಾಮಾಂತರ ಪ್ರದೇಶದ ಮಹಿಳೆಯರಲ್ಲಿ ಅರಿವು ಮೂಡಿಸಲು ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರ ಸಹಕಾರ ಪಡೆಯಬೇಕು. ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ, ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಎನ್‌ಜಿಓ ಸಂಸ್ಥೆಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಜ.9 ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಜೆಸ್ಕಾಂ ನಗರ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 110/11 ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜು ಆಗುವ ಎಫ್–25 ಫೀಡರ್‌ನ ವಿವಿಧ ಏರಿಯಾಗಳ ವಿದ್ಯುತ್ ದುರಸ್ತಿ ಕಾರ್ಯ ಕೈಗೊಳ್ಳುತ್ತಿರುವುದರಿಂದ ಜ.09 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ನಗರದ ಆರ್‌ಕೆ ಮಿಲ್ ರಸ್ತೆ, ಬಾಪೂಜಿ ನಗರ, ಬಾಪೂಜಿ ನಗರ ವೃತ್ತ, ರಾಣಿ ತೋಟ, ಕಣೇಕಲ್ ಬಸ್‌ನಿಲ್ದಾಣ, ಮಾರ್ಕೆಟ್, ಮರ್ರಿಸ್ವಾಮಿ ಮಠ, ಟೋಪಿಗಲ್ಲಿ ಸೇರಿದಂತೆ ಮುಂತಾದ ಏರಿಯಾಗಳಲ್ಲಿ ವಿದ್ಯುತ್‌ವ್ಯತ್ಯಯವಾಗಲಿದ್ದು,ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಣಕ್ಕಿಂತ ಮಿಗಿಲಾದ ಸಂಪತ್ತು ಬೇರೊಂದಿಲ್ಲ

## ವಕ್ಫ್ ಭೋರ್ಡ್ ಮಾಜಿ ಅಧ್ಯಕ್ಷ ಟಿಂಕರ್ ರಫೀಕ್ ಹೇಳಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಶಿಕ್ಷಣಕ್ಕಿಂತ ಮಿಗಿಲಾದ ಸಂಪತ್ತು ಬೇರೊಂದಿಲ್ಲ. ಮಕ್ಕಳು ಮೊಬೈಲ್ ಗೀಳು ಬಿಟ್ಟು ಪುಸ್ತಕ ಕೈಯಲ್ಲಿಡಿದು ಅಭ್ಯಾಸ ಮಾಡಿದರೆ, ಭವಿಷ್ಯದಲ್ಲಿ ಉನ್ನತ ಹುದ್ದೆ ಅಲಂಕರಿಸಲು ಸಾಧ್ಯ ಎಂದು ವಕ್ಫ್ ಭೋರ್ಡ್ ಮಾಜಿ ಅಧ್ಯಕ್ಷ ಟಿಂಕರ್ ರಫೀಕ್ ಹೇಳಿದರು.

ನಗರದ ಮೌಲಾನ ಅಬ್ದುಲ್ ಕಲಾಂ ಆಜಾದ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 120ಕ್ಕೂ ಅಧಿಕ ಬಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ಯಾಡ್, ಪೆನ್, ಪೆನ್ಸಿಲ್ ನೀಡುವ ಮೂಲಕ ವಕ್ಫ್ ಭೋರ್ಡ್ ಮಾಜಿ ಅಧ್ಯಕ್ಷ ಟಿಂಕರ್ ರಫೀಕ್ ತಮ್ಮ ಹುಟ್ಟುಹಬ್ಬವನ್ನು ಮಕ್ಕಳೊಂದಿಗೆ ಆಚರಿಸಿಕೊಂಡು ಮಾತನಾಡಿದರು. ಎಂತಹ ಕಷ್ಟ ಬಂದರೂ ಶಿಕ್ಷಣ ಕೈಬಿಡಬಾರದು. ಶಿಕ್ಷಣ ವೈಯುಕ್ತಕ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗುವುದರ ಜೊತೆ ಸದೃಢ ದೇಶ ನಿರ್ಮಾಣಕ್ಕೂ ಸಹಕಾರಿಯಾಗಲಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಸಮಾಜಮುಖಿ ಹೋರಾಟಗಾರರಾದ ವೆಂಕಟೇಶ್.ಎಮ್. ಡಿ. ಖಾಸಿಂ, ಉಸ್ಮಾನ್, ಹೈದರ, ಶಾಲೆಯಾ ಶಿಕ್ಷಕರು ಮತ್ತು ಶಿಕ್ಷಕಿಯರು ಇದ್ದರು.

# ಬಳ್ಳಾರಿಗೆ ಜ.8-9 ರಂದು ರಾಜ್ಯ ಮಾನವ ಹಕ್ಕುಗಳ ಆಯೋಗ, ಅಹವಾಲು ಸ್ವೀಕಾರ, ಸಂವಾದ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಟಿ.ಶ್ಯಾಮ್ ಭಟ್ ಹಾಗೂ ನ್ಯಾಯಾಂಗ ಸದಸ್ಯರಾದ ಎಸ್.ಕೆ.ವಂಟಿಗೋಡಿ ಅವರು ಜ.08 ಮತ್ತು 09 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

ಜ.08 ರಂದು ಮಧ್ಯಾಹ್ನ ಬೆಂಗಳೂರಿನಿಂದ ಹೊರಟು, ಸಂಜೆ 07.30 ಗಂಟೆಗೆ ಬಳ್ಳಾರಿಗೆ ಆಗಮಿಸುವರು. ಬಳಿಕ ಜಿಂದಾಲ್‌ನ ಸರ್ಕ್ಯೂಟ್ ಹೌಸ್‌ನಲ್ಲಿ ವಾಸ್ತವ್ಯ ಮಾಡುವರು. ಜ.09 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ಬಳ್ಳಾರಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡುವರು. ಮಧ್ಯಾಹ್ನ 02 ಗಂಟೆಯಿಂದ 03 ಗಂಟೆಯವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಮಧ್ಯಾಹ್ನ 03.30 ಗಂಟೆಯಿಂದ ಸಂಜೆ 04.30 ಗಂಟೆಯವರೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂವಾದ ಸಭೆ ನಡೆಸುವರು. ಬಳಿಕ ಸಂಜೆ 04.30 ರಿಂದ 05.30 ರವರೆಗೆ ಪತ್ರಿಕಾಗೋಷ್ಠಿ ನಡೆಸುವರು. ನಂತರ ಸಂಜೆ 06 ಗಂಟೆಗೆ ಬೆಂಗಳೂರಿಗೆ ಪ್ರಯಾಣಿಸುವರು ಎಂದು ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ್ ಅವರು ತಿಳಿಸಿದ್ದಾರೆ.

# ಶಿವಯೋಗಿ ಸಿದ್ಧರಾಮೇಶ್ವರ ಆಚರಣೆ ಅರ್ಥಪೂರ್ಣವಾಗಿರಲಿ

## ತಹಸೀಲ್ದಾರ್ ಎಂ. ರೇಣುಕಾ ಸೂಚನೆ | ತಾಲೂಕು ಕಚೇರಿಯಲ್ಲಿ ಪೂರ್ವಭಾವಿ ಸಭೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಶಿವಯೋಗಿ ಸಿದ್ದರಾಮೇಶ್ವರ,ಮಹಾಯೋಗಿ ವೇಮನ ಹಾಗೂ ಅಂಬಿಗರ ಚೌಡಯ್ಯ ಜಯಂತಿಯನ್ನು ತಾಲೂಕು ಮಟ್ಟದಲ್ಲಿ ನಿಗದಿತ ದಿನದಂದು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ತಹಸೀಲ್ದಾರ್ ಎಂ. ರೇಣುಕಾ ಸೂಚಿಸಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಬುಧವಾರ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ 14 ರಂದು ಸಿದ್ದರಾಮೇಶ್ವರ ಜಯಂತಿ, 19 ರಂದು ಮಹಾ ಯೋಗಿ ವೇಮನ ಹಾಗೂ 21 ರಂದು ಅಂಬಿಗರ ಚೌಡಯ್ಯ ಜಯಂತಿಗಳನ್ನು ತಾಲೂಕಿನ ಎಲ್ಲಾ ಕಚೇರಿಗಳಲ್ಲಿ, ಶಾಲಾ, ಕಾಲೇಜುಗಳಲ್ಲಿ ಹಾಗೂ ಸ್ಥಳೀಯ ಗ್ರಾಪಂ ಕಚೇರಿಗಳಲ್ಲಿ ಆಚರಣೆ ಮಾಡಿ ಆ ಮಹನೀಯರ ಕೊಡುಗೆಗಳನ್ನು ತಿಳಿಸಬೇಕು ಎಂದು ಸಭೆಯಲ್ಲಿ ಸೂಚನೆ ನೀಡಿದರು. ಕಳೆದ ಬಾರಿ ಕೆಲ ಗ್ರಾಮಗಳ ಶಾಲೆಗಳಲ್ಲಿ ಹಾಗೂ ಗ್ರಾಪಂ ಕಚೇರಿಗಳಲ್ಲಿ ಆಚರಣೆ ಮಾಡಿಲ್ಲ ಎನ್ನುವ ದೂರುಗಳು ಬಂದಿದ್ದು, ಈ ಬಾರಿ ದೂರುಗಳು ಬಂದಲ್ಲಿ ಶಿಸ್ತುಕ್ರಮಕ್ಕೆ ಮುಂದಾಗಿ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಕಡಕ್ ಸೂಚನೆ ನೀಡಿದರು. ಸಮಾಜ ಸುಧಾರಣೆಯಲ್ಲಿ ಇಂಥಹ ಮಹನೀಯರ ತತ್ವಾದರ್ಶಗಳು ನಮಗೆ ಮಾರ್ಗದರ್ಶಿಯಾಗಿದ್ದು ಅವರ ಕೊಡುಗೆಯನ್ನು ನಾವು ಮುಂದಿನ ಪೀಳಿಗೆಗೆ ತಿಳಿಸಬೇಕಾಗಿದೆ. ಆದ್ದರಿಂದ ಆಯಾ ದಿನಗಳಲ್ಲಿ ಈ ಮಹನೀಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರ ಕುರಿತು ಸಾರ್ವಜನಿಕರಿಗೆ ಹಾಗೂ ವಿಧ್ಯಾರ್ಥಿಗಳಿಗೆ ತಿಳಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು. ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ಪಪಂ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಶಿಕ್ಷಣ ಸಮನ್ವಯಾಧಿಕಾರಿ ಎಸ್.ಎಸ್.ಜಗದೀಶ್, ವಲಯ ಅರಣ್ಯಾಧಿಕಾರಿ ಬಿ.ಎಸ್. ಮಂಜುನಾಥ, ಉಪ ನೋಂದಣಿಧಿಕಾರಿ ವೈಶಾಲಿ ಮುಖಂಡರಾದ ಗಂಗಾಮತಸ್ಥ ಸಮಾಜದ ತಾಲೂಕು ಅಧ್ಯಕ್ಷ ಹುಲಿರಾಜ, ಕುಬೇರ, ಇಟಗಿ ಪ್ರಕಾಶ್, ಶ್ರೀನಿವಾಸ್, ಬೊಪ್ಪಲಾಪುರ ವೀರೇಶ್, ಡಿ.ಟಿ.ಹನುಮಂತಪ್ಪ, ಹನುಮಂತಪ್ಪ, ನಾಗರಾಜ ಸೇರಿದಂತೆ ಕಂದಾಯ ಇಲಾಖೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

# ಸಾಕ್ಷರತೆ ಸಾಧಿಸಲು ಗಣಿತ ಮೇಳ ಸಹಕಾರಿ



■ **ಹಂಪಿ ಟೈಮ್ಸ್ ಕೊಟ್ಟೂರು.**

ವಿದ್ಯಾರ್ಥಿಗಳನ್ನು ಸಾಮಾಜಿಕರಣಗೊಳಿಸುವುದರ ಜೊತೆಗೆ ಆರ್ಥಿಕತೆಯಲ್ಲಿ ಸಾಕ್ಷರತೆಯನ್ನು ಸಾಧಿಸಲು ಗಣಿತ ಮೇಳ ಉಪಯುಕ್ತವಾಗಿದೆ ಎಂದು ಮುಖ್ಯಗುರುಗಳು ಎಂ.ಎಸ್.ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಉಜ್ಜಿನಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಗಣಿತ ದಿನಾಚರಣೆ ನಿಮಿತ್ತ ಏರ್ಪಡಿಸಿದ್ದ ಗಣಿತ ಮೇಳ ಕಾರ್ಯಕ್ರಮದಲ್ಲಿ ಮಾತನಾಡಿದರು. ಕನ್ನಡ ಶಿಕ್ಷಕಿ ಜಿ.ಸರೋಜ ಮಕ್ಕಳಿಗೆ ವ್ಯಾಪಾರ ಮಾಡುವಾಗ ಗಣಿತದ ಕಲಿಕೆಗೆ ಹೆಚ್ಚು ಸಹಕಾರಿ ಹಾಗೂ ನೈಜ ಜೀವನದೊಂದಿಗೆ ಕಲಿಕೆಯನ್ನು ಬೆಸುಗೆ ಗೊಳಿಸುವಲ್ಲಿ ಗಣಿತ ಮೇಳ ಸಹಕಾರಿ ಎಂದರು.

ಗಣಿತ ಶಿಕ್ಷಕಿ ಸುಮ ಕೆ ಎಚ್. ಎನ್ ಸಿಎಫ್–2005ರ ಪ್ರಕಾರ ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಅತ್ಯವಶ್ಯಕವಾಗಿದ್ದು, ಗಣಿತ ಪರಿಕಲ್ಪನೆಗಳನ್ನು ಮಕ್ಕಳು ಅರ್ಥಮಾಡಿ ಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಬಿಡಿಸುವ ಜೊತೆಗೆ ಗಣಿತದಲ್ಲಿ ಯಶಸ್ಸು ಪಡೆಯಲು ಈ ಮೇಳ ನೆರವಾಗಲಿದೆ ಎಂದರು.

6–8ನೇ ತರಗತಿಯ ವಿದ್ಯಾರ್ಥಿಗಳು ತರಕಾರಿ, ಮಂಡಕ್ಕಿ, ಹಣ್ಣಿನ ಅಂಗಡಿ, ಸ್ಟೇಷನರಿ ಅಂಗಡಿ, ಸ್ವೀಟ್ ಅಂಗಡಿ ತೆರೆಯುವ ಮೂಲಕ ವ್ಯಾಪಾರದ ಪರಿಕಲ್ಪನೆಯನ್ನು ಸ್ವತಃ ಅನುಭವಿಸಿ ಕಲಿಕೆಯನ್ನು ಪರಿಣಾಮಕಾರಿಯಾಗಿಸಿಕೊಂಡರು. ಗಣಿತದ ಮೂಲ ಕ್ರಿಯೆಗಳನ್ನು ಅರ್ಥೈಸಿ ಕೊಂಡರು.

ಉಜ್ಜಿನಿ ಜಗದ್ಗುರು ಸಂಯುಕ್ತ ಪ.ಪೂ. ಕಾಲೇಜ್ ನ ಪ್ರೌಢ ಶಾಲಾ ಮುಖ್ಯಗುರುಗಳು ಕೊಟ್ರೇಶ್ ಮಕ್ಕಳ ವಿವಿಧ ಬಗೆಯ ಅಂಗಡಿಗಳ ಹಾಗೂ ವ್ಯಾಪಾರ ಪ್ರಕ್ರಿಯೆಯನ್ನು ವೀಕ್ಷಿಸಿ ಮೆಚ್ಚುಗೆ ಸೂಚಿಸಿದರು.

ಮೇಳಕ್ಕೆ ಅಜೀಂ ಪ್ರೇಮ್ ಜಿ ಫೌಂಡೇಶನ್ನ ಉದ್ಯೋಗಿ ಕುಮಾರಿ ಮಂಜುಳ ಮೇಳದ ರೂಪರೇಷ ಕುರಿ ತಂತೆ ಮಕ್ಕಳಿಗೆ ತಿಳಿಸಿ ಮೇಳ ಯಶಸ್ವಿಗೆ ಕಾರಣರಾದರು. ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಶಿಕ್ಷಕರು, ವಿದ್ಯಾರ್ಥಿ ಗಳು ಹಾಜರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## Off to outer space Tomorrow Morning

**Most important 2 marks questions and answers.**

**1. State reason for the poet say "calendars and clocks" are useless in space. Or Why does the speaker in 'Off to Outer Space Tomorrow Morning' not know the time and date or day?**

**Ans:** Because the space craft rotates around the earth. There would no day and nights nor any change in seasons. So the poet says "calendars and clocks" are useless in space.

**2. Why does the poet in the poem 'Off To Outer Space Tomorrow Morning' feels that he is imprisoned. What might have been the reason for him to have such a feeling? Or Why does Norman Nicholson call the space flight, 'a solitary confinement'? Or Why does Norman Nicholson feel that he is imprisoned in space?**

**Ans:** In space the astronaut will have no letters, no mail, no friends, or nobody to visit to share happy moments. He is just confined to a solitary confinement as in jail in the capsule door of the spacecraft.

**3. The speaker in the poem 'off To Outer Space Tomorrow Morning' says, "Tea cups circling round me like the planets round the sun." Why does it happen only in space and not on the earth?**


**Ans:** On the earth, each object is bound to earth's surface by the attraction of the earth called gravity. They rest or move keeping balance on the centre of Gravity. But in space the objects lost weight and the gravitational power of the earth which then move freely around some object of more weight. So the Tea cups circling round me like the planets round the sun.

**4. As the astronaut is flying out of the earth he has doubts about his return. How does he convey it? Or The speaker 'Off to Outer Space Tomorrow Morning' is uncertain of his return. How does he express this?**

**Ans:** The astronaut suggests that people around him could start the count down and take a last look at him. They could cross out his name from the telephone book.This shows his doubts about his returning.

**5. Give instances of daily routine mentioned in the poem 'Off to outer space Tomorrow morning.'**

**Ans:** The daily routine mentioned in the poem are writing letters, posting mail, people visiting others, milkman knocking at the door in the morning etc. The speaker can't do all these because he will be alone in the space. He feels that he need not do all these in space.




Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಉತ್ತಮ ಆರೋಗ್ಯಕ್ಕಾಗಿ
ಗಾಣದ ಪರಿಶುದ್ಧ ಎಣ್ಣೆ ಬಳಸಿ
ಶ್ರೀ ಶಂಕರ ಎಂಟರ್‌ಪ್ರೈಸಸ್ ಲಿ.
# ಜಂಗಮಸೋವೆನಹಳ್ಳಿ, ಕೂಡ್ಲಿಗಿ ತಾಲೂಕು, ವಿಜಯನಗರ ಜಿಲ್ಲೆ
ಶೇಂಗ ಎಣ್ಣೆ
ಕೊಬ್ಬರಿ ಎಣ್ಣೆ

CONTACT FOR WHOLESALE & RETAIL COLD PRESSED OIL
M:90083 66606



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 08-01-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.72 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 8270 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 75.580 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1589.01 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.221 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

09-01-2025 - ಗುರುವಾರ

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಭರಣಿ |
| ಯೋಗ | : ಸಾಧ್ಯ |
| ಕರಣ | : ಗರಜ |
| ಸೂರ್ಯೋದಯ | : 07:11:18 |
| ಸೂರ್ಯಾಸ್ತ | : 17:57:06 |
| ರಾಹು ಕಾಲ | : 13:55-15:16 |
| ಯಮಘಂಡ ಕಾಲ | : 07:11-08:32 |
| ಗುಳಿಕ ಕಾಲ | : 09:53-11:13 |

## ಮೈಕ್ರೋ ನ್ಯೂಸ್

### ಜ.20 ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆ ಸಂಸದರಾದ ಇ. ತುಕಾರಾಂ ಅವರ ಅಧ್ಯಕ್ಷತೆಯಲ್ಲಿ ಜ.20 ರಂದು ಹಗರಿಬೊಮ್ಮನಹಳ್ಳಿ ತಾಪಂ ಸಭಾಂಗಣದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ ಮೋಹಮ್ಮದ್ ಅಲಿ ಅಕ್ರಮ್ ಷಾ ತಿಳಿಸಿದ್ದಾರೆ.

### ಜ.13 ರಂದು ಜಿಲ್ಲಾ ಮಟ್ಟದ ಪ್ರತಿಭಾವಂತ ಕ್ರೀಡಾಪಟುಗಳ ಆಯ್ಕೆ

ಹಂಪಿ ಟೈಮ್ಸ್ ಹೊಸಪೇಟೆ

2025-26ನೇ ಸಾಲಿನ ಪ್ರತಿಭಾವಂತ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ಜ.13 ರಂದು ಬೆಳಗ್ಗೆ 11 ಗಂಟೆಗೆ ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳ ದೈಹಿಕ ಪರೀಕ್ಷೆಯನ್ನು ನಡೆಸಲಾಗುವುದು. ಭಾಗವಹಿಸುವ ಕ್ರೀಡಾಪಟುಗಳು ಪ್ರಸ್ತುತ 4ನೇ, 7ನೇ, 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಕ್ರೀಡಾಪಟುಗಳು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಅರ್ಹರು ವಯಸ್ಸಿನ ಪ್ರಮಾಣ ಪತ್ರ, ಮತ್ತು ಆಧಾರ್ ಕಾರ್ಡನೊಂದಿಗೆ ಆಗಮಿಸಬೇಕು. ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ ವಿಭಾಗ ಮಟ್ಟದಲ್ಲಿ ಜ.27, 28 ರಂದು ಬೆ.11 ಗಂಟೆಗೆ ಬಳ್ಳಾರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಭಾಗವಹಿಸಲು ಯಾವುದೇ ಭತ್ಯೆ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಎಂ.ಜಾಕಿರ್-9036335986, ಮಹ್ಮದ್ ಮಸೂದ್-9886688858 ತರಬೇತಿದಾರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿ+4 ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿಗೆ ಅಡಿಗಲ್ಲು

### ಶಾಸಕ ಎನ್ ಟಿ ಶ್ರೀನಿವಾಸ ಚಾಲನೆ | ಕರ್ನಾಟಕ ಗೃಹ ಮಂಡಳಿಯ 650 ಲಕ್ಷ ರೂ. ಅನುದಾನ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ತಾಯಕನಹಳ್ಳಿ ಗಡಿ ಗ್ರಾಮದಲ್ಲಿ ಇರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 2023-24ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅನುಷ್ಠಾನ ಇಲಾಖೆ ಕರ್ನಾಟಕ ಗೃಹ ಮಂಡಳಿಯ ಅನುದಾನ 650.00 ಲಕ್ಷ ರೂ.ಗಳ ಲಕ್ಷ ವೆಚ್ಚದಲ್ಲಿ ಜಿ+4 ವಿದ್ಯಾರ್ಥಿ ನಿಲಯದ ಕಟ್ಟಡ ಕಾಮಗಾರಿಗೆ ಶಾಸಕ ಡಾ.ಎನ್.ಟಿ ಶ್ರೀನಿವಾಸ್ ಬುದುವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ಈ ಭಾಗ ತಾಲೂಕಿನಲ್ಲಿ ಅತಿ ಹಿಂದುಳಿದ ಪ್ರದೇಶವಾಗಿರುವುದರಿಂದ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಬಿ ಝಡ್ ಜಮೀರ್ ಖಾನ್ ರವರು ಸಹಕಾರದೊಂದಿಗೆ ವಿದ್ಯಾರ್ಥಿನಿಲಯ ಕಟ್ಟಡಕ್ಕೆ ಹೆಚ್ಚಿನ ಅನುದಾನವನ್ನು ನೀಡಿದ್ದಾರೆ. ನಮ್ಮ ತಾಲೂಕಿನಲ್ಲಿ ರಾಷ್ಟ್ರ, ರಾಜ್ಯಮಟ್ಟದ, ಯಾವುದೇ ಶಾಲೆಗಳಿಲ್ಲ ಆದ್ದರಿಂದ ಸರ್ಕಾರಿ ವಸತಿ ಶಾಲೆಗಳನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯುವಂತಹ ಕೆಲಸ ಶಿಕ್ಷಕರಿಂದ ಆಗಬೇಕು, ನಾನು ಅಶಿಸ್ತನ್ನು ಸಹಿಸಲಾರೆ ನೀವುಗಳು ಉತ್ತಮ ಕೆಲಸ ಮಾಡಿದರೆ ಹೆಮ್ಮೆ ಪಡುತ್ತೇನೆ ಎಂದರು. ಕರ್ನಾಟಕ ಗೃಹ ಮಂಡಳಿಯವರು ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವಂತೆ ತಾಕಿತು ಮಾಡಿದರು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ, ಜಿಲ್ಲಾ ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿ ಗುಡ್ಡಪ್ಪ, ಕರ್ನಾಟಕ ಗೃಹ ಮಂಡಳಿ ಸಿಬ್ಬಂದಿ ವಸಂತ ಕುಮಾರಿ, ಹೂಡೇಂ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೇ ಹಾಗೂ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಭೂದಾನಿ ಗನಿಸಾಬ್ ಪತ್ನಿ ಪ್ಯಾರ್ಮಾಬಿ, ನಜೀಮ್ ಸಾಬ್, ನೂರಲ್ಲ ಭಾಷಾ, ಜುಮ್ಮೊಬನಹಳ್ಳಿ ಗ್ರಾ.ಪಂ ಅಧ್ಯಕ್ಷ ಸಾಕ್ಕಮ್ಮ ಕೆ ಒಬಣ್ಣ, ಹೂಡೇಂ ಗ್ರಾ.ಪಂ ಸದಸ್ಯರುಗಳಾದ ಶಶಿಕಲಾ ಜಯಣ್ಣ, ಪುಟ್ಟಮ್ಮ ಮಲ್ಲಿಕಾರ್ಜುನ್, ಕೆ ರಾಘವೇಂದ್ರ ಹಾಗೂ ಮುಖ ಕಾಂಗ್ರೆಸ್ ಮುಖಂಡರಾದ ಜಿ ಓಬಣ್ಣ, ಮಂಜಣ್ಣ ಗುಡುಮುಣುಗು, ಹೂಡೇಂ ಬೋಸೆ ಮಲ್ಲಯ್ಯ, ಕೆ.ಆರ್ ರವಿ ಹೂಡೇಂ, ಸೂರ್ಯಪ್ರಕಾಶ್, ಹೊಸಹಳ್ಳಿ, ರುದ್ರಮುನಿ ತಿಪ್ಪೇಹಳ್ಳಿ, ವೀರೇಶ್, ಅಲ್ಪಸಂಖ್ಯಾತರ ಮುರಾರ್ಜಿ ಶಾಲೆಯ ಪ್ರಾಂಶುಪಾಲರು ತಿಪ್ಪೇಸ್ವಾಮಿ, ರಂಗಪ್ಪ ತಾಯಕನಹಳ್ಳಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಸೇರಿದಂತೆ ಮುಖಂಡರು ಶಾಲೆಯ ಶಿಕ್ಷಕರು, ಸಾರ್ವಜನಿಕರು, ವಿದ್ಯಾರ್ಥಿಗಳು ಇದ್ದರು.

# ಗ್ಯಾಸ್ ಸಂಪರ್ಕ ನಿಯಮ ಅನುಸರಿಸಿ

### ಗ್ರಾಹಕರ ವ್ಯವಹಾರಗಳ ಇಲಾಖೆಗಳ ಉಪನಿರ್ದೇಶಕಿ ಸಕೀನಾ ಹೇಳಿಕೆ | ಟಿಪ್ಸ್ ನೀಡುವಂತಿಲ್ಲ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಅನಿಲ ಸಂಪರ್ಕ ಸೇವೆ ಪಡೆಯುವ ಎಲ್ಲಾ ಬಳಕೆದಾರರು (ಗ್ರಾಹಕರು) ತಮ್ಮ ದಿನನಿತ್ಯ ಬಳಸುವ ಗ್ಯಾಸ್ ಸಂಪರ್ಕದ ಬಗ್ಗೆ ಎಲ್ಲಾ ನಿಯಮ ತಿಳಿದುಕೊಂಡು ನಿಯಮಾನುಸಾರ ಬುಕ್ ಮಾಡಿಕೊಂಡು ಖರೀದಿಸಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗಳ ಉಪನಿರ್ದೇಶಕರಾದ ಸಕೀನಾ ಅವರು ತಿಳಿಸಿದ್ದಾರೆ.

ಗ್ರಾಹಕರು ಸಂಬಂಧಪಟ್ಟ ಗ್ಯಾಸ್ ಏಜೆನ್ಸಿಯವರಿಂದ ಮುದ್ರಿತ ರಶೀದಿ ಪಡೆಯಬೇಕು. ಮುದ್ರಿತವಾದ ರಶೀದಿಯಲ್ಲಿರುವ ಮೊತ್ತವನ್ನು ಮಾತ್ರ ಸಿಲಿಂಡರ್ ಡೆಲೆವರಿಯವರಿಗೆ ನೀಡಬೇಕು. ಯಾವುದೇ ಕಾರಣಕ್ಕೂ ಹೆಚ್ಚಿನ ಮೊತ್ತ (ಟಿಪ್ಸ್) ನೀಡುವಂತಿಲ್ಲ.

ಹೆಚ್ಚಿನ ಮಾಹಿತಿಗಾಗಿ ರಶೀದಿಯಲ್ಲಿರುವ ನಂಬರ್‌ಗೆ ಕರೆ ಮಾಡಿ ತಮ್ಮ ಎಲ್ಲಾ ಸಂಶಯಗಳನ್ನು ಬಗೆಹರಿಸಿಕೊಳ್ಳಬಹುದು. ಸಿಲಿಂಡರ್‌ನ ಪೈಪ್ ಖರೀದಿಸುವಾಗ ಅದರ ಮೇಲೆ ನಮೂದಿಸಿರುವ ಮೊತ್ತ ಮಾತ್ರ ಕೊಟ್ಟು ಖರೀದಿಸಬೇಕು.

**ಗ್ಯಾಸ್ ಏಜೇನ್ಸಿಯವರ ಪ್ರಮುಖ ಕರ್ತವ್ಯಗಳು**

ಗ್ರಾಮೀಣ ಪ್ರದೇಶದ ಗ್ರಾಹಕರಿಗೆ ಆನ್‌ಲೈನ್‌ನಲ್ಲಿ ಬುಕಿಂಗ್ ಮಾಡುವುದು



ಮತ್ತು ಆನ್‌ಲೈನ್‌ನಲ್ಲಿ ಹಣ ಪಾವತಿ ಮಾಡುವ ಬಗ್ಗೆ ಜಾಗೃತಿ ಮೂಡಿಸುವುದು. ಗ್ರಾಮೀಣ ಪ್ರದೇಶಗಳಲ್ಲಿ ಸಿಲಿಂಡರ್ ಡೆಲಿವರಿ ಮಾಡುವ ಸಂದರ್ಭದಲ್ಲಿ ಡೆಲಿವರಿ ವಾಹನದ ಮೇಲೆ ಸಿಲಿಂಡರ್‌ನ ಮೊತ್ತದ ಬಗ್ಗೆ ಸಂಬಂಧಿಸಿದ ಗ್ಯಾಸ್ ಏಜೆನ್ಸಿಯವರು ಮೊತ್ತದ ಪಟ್ಟಿಯನ್ನು ಪ್ರದರ್ಶಿಸುವುದು.

ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ತೂಕದ ಯಂತ್ರವನ್ನು ಸತ್ಯಾಪನೆ ಮತ್ತು ಮುದ್ರೆ ಹಾಕಿಸುವುದು ಹಾಗೂ ಸತ್ಯಾಪನೆ ಪ್ರಮಾಣವನ್ನು ನಿಯಮಾನುಸಾರ ಪ್ರದರ್ಶಿಸುವುದು. ಪ್ರತಿ ಡೆಲಿವರಿ ವಾಹನದಲ್ಲಿ ಸಿಲಿಂಡರ್ ತೂಕ ಮಾಡುವ "ಸ್ಪ್ರಿಂಗ್ ಬ್ಯಾಲೆನ್ಸ್"ನ್ನು ಕಡ್ಡಾಯವಾಗಿ ಇಡಬೇಕು.

ಸಿಲೆಂಡರ್ ಡೆಲಿವರಿ ಮಾಡುವಾಗ ಗ್ರಾಹಕರು ಸಿಲಂಡರ್ ತೂಕ ಸರಿಯಾಗಿರುವುದನ್ನು ತೋರಿಸಲು ಕೇಳಿದಾಗ ಕಡ್ಡಾಯವಾಗಿ ಸ್ಪ್ರಿಂಗ್ ಬ್ಯಾಲೆನ್ಸ್ ಮೂಲಕ ತೂಕ ಮಾಡಿ ಸಿಲೆಂಡರ್ ಮೇಲೆ ಬರೆದಿರುವ ನಿವ್ವಳ ತೂಕ (ಉಡಿಥ ಘಜುರುಣ) ಸರಿಯಾಗಿರುವುದನ್ನು ತೂಕ ಮಾಡಿ ಗ್ರಾಹಕರಿಗೆ ದೃಢಪಡಿಸಬೇಕು.

ಗ್ರಾಹಕರಿಂದ ಮುದ್ರಿತ ಬಿಲ್‌ನಲ್ಲಿ ನಮೂದಾಗಿರುವ ಮೊತ್ತವನ್ನು ಮಾತ್ರ ಸಿಲಿಂಡರ್ ಡೆಲಿವರಿಗಾಗಿ ಪಡೆಯುವುದು, ಮುದ್ರಿತ ಬಿಲ್ಲಿಗಿಂತ ಹೆಚ್ಚಿನ ಮೊತ್ತವನ್ನು ಪಡೆಯುವುದು ಅಥವಾ ಹೆಚ್ಚಿನ ಮೊತ್ತಕ್ಕೆ ಬೇಡಿಕೆ ಇಡುವುದು ಐಜರಿಚಿಟ ಒಜಣಡಿಂಟಂರಿಥಿ ಕಅ ಖಣಟಛ-2011 ರ 18(2) ರ ಉಲ್ಲಂಘನೆಯಾಗುತ್ತದೆ.

ಗ್ಯಾಸ್ ಡೆಲಿವರಿ ಮಾಡುವ ವಾಹನಗಳನ್ನು ನೋಂದಾಯಿಸಿಕೊಳ್ಳಬೇಕು ಹಾಗೂ ಸುರಕ್ಷೆ ಕಾಪಾಡಿಕೊಳ್ಳಬೇಕು. ಯಾವುದೇ ಅನಧೀಕೃತ ವಾಹನಗಳಲ್ಲಿ ಸಿಲಿಂಡರ್ ಸರಬರಾಜು ಮಾಡುವಂತಿಲ್ಲ. ಒಂದು ವೇಳೆ ಮಾಡಿದ್ದಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಮೇಲ್ಕಂಡ ಹಾಗೂ ನಿಯಮಾನುಸಾರ ಸಮರ್ಪಕವಾಗಿ ಗ್ರಾಹಕರಿಗೆ ಸೇವೆ ಒದಗಿಸದೆ ಇರುವ ಗ್ಯಾಸ್ ಏಜೇನ್ಸಿಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಂಗಾರು ಹಂಗಾಮಿನ ತೊಗರಿ ಉತ್ಪನ್ನ ಖರೀದಿ ಪ್ರತಿ ಕ್ವಿಂಟಾಲ್‌ಗೆ 7550/- ರೂ ನಿಗದಿ : ಡಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಬೆಂಬಲ ಯೋಜನೆಯಡಿ 2024-25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ



ವಿಜಯನಗರ ಜಿಲ್ಲೆಯಲ್ಲಿ ರೈತರು ಬೆಳೆದ ತೊಗರಿ ಉತ್ಪನ್ನವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.7550 ರಂತೆ ರೈತರಿಂದ ಖರೀದಿಗಾಗಿ ಖರೀದಿ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಟಾಸ್ಕಪೋರ್ಸ್ ಸಮಿತಿ ಅಧ್ಯಕ್ಷರಾದ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ ಹೊಸಪೇಟೆ ಶಾಖೆಯಿಂದ ಜಿಲ್ಲೆಯಲ್ಲಿ ಹೂವಿನ ಹಡಗಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಖರೀದಿ ಕೇಂದ್ರವನ್ನು ಆರಂಭಿಸಲಾಗಿದೆ. ಜಿಲ್ಲೆಯ ರೈತರು ಬೆಂಬಲ ಯೋಜನೆಯನ್ನು ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಯಾವುದೇ ರೈತರು ಮಧ್ಯವರ್ತಿಗಳ ಮೊರೆ ಹೋಗದಂತೆ ನೇರವಾಗಿ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯುವಂತೆ ತಿಳಿಸಿದ್ದಾರೆ.



**ಅಗತ್ಯ ದಾಖಲೆಗಳು** : 2024-25 ನೇ ಸಾಲಿನ ಪಹಣಿ ಪತ್ರ, ಆಧಾರ ಕಾರ್ಡ್, ಬ್ಯಾಂಕ್ ಖಾತೆ ಪುಸ್ತಕದ ನಕಲು ಪ್ರತಿ, ಶೇಂಗಾ ಖರೀದಿ ಕೇಂದ್ರಗಳಲ್ಲಿ ರೈತರು ತಮ್ಮ ಹೆಸರನ್ನು ನೋಂದಾಣಿ ಮಾಡಿಸಿದ ರೈತರು ಫ್ರೂಟ್ಸ್ ತಂತ್ರಾಂಶದಲ್ಲಿ ನೊಂದಾಯಿಸಿರಬೇಕು. ಹಾಗೂ ಎಫ್‌ಐಡಿ ಯನ್ನು ಪಡೆಯುವುದು ಕಡ್ಡಾಯ. ರೈತರಲ್ಲಿ ಫ್ರೂಟ್ಸ್ ಐಡಿ ಇಲ್ಲದೇ ಇದ್ದಲ್ಲಿ ಫ್ರೂಟ್ಸ್‌ನಲ್ಲಿ ಯಾವುದಾದರು ತಾಂತ್ರಿಕ ದೋಷವಿದ್ದಲ್ಲಿ ರೈತರು ಕೃಷಿ ಇಲಾಖೆಯನ್ನು ಸಂಪರ್ಕಿಸಿ ಅವಶ್ಯಕ ಮಾಹಿತಿ ಪಡೆಯ ಬಹುದು ಎಂದು ತಿಳಿಸಿದ್ದಾರೆ.

## ಆನಂದ ಬಾಣ




14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94486 33038
Email:- hampitimes@gmail.com